# 2013-14 ನೇ ಸಾಲಿನ ಆಯ-ವ್ಯಯ

ಪೂಜ್ಯ ಮಹಾ ಪೌರರೇ, ಉಪ ಮಹಾಪೌರರೇ, ನಗರ ಯೋಜನಾ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ಸಾರ್ವಜನಿಕ ಆರೋಗ್ಯ, ಶಿಕ್ಷಣ ಹಾಗೂ ಸಾಮಾಜಿಕ ನ್ಯಾಯ ಸಮಿತಿ ಮತ್ತು ಲೆಕ್ಕಗಳ ಸ್ಥಾಯಿ ಸಮಿತಿ ಅಧ್ಯಕ್ಷರುಗಳೇ ಎಲ್ಲಾ ಪಕ್ಷಗಳ ನಾಯಕರೇ, ಗೌರವಾನ್ವಿತ ಪಾಲಿಕೆಯ ಸದಸ್ಯರೇ, ಮಾನ್ಯ ಕಮೀಶನರರೇ, ಅಧಿಕಾರಿಗಳೇ, ಪತ್ರಿಕಾ ಪ್ರತಿನಿಧಿಗಳೇ, ದೂರದರ್ಶನ ಮಾಧ್ಯಮ ಪ್ರತಿನಿಧಿಗಳೇ, ಛಾಯಾ ಚಿತ್ರಗಾರರೇ ಹಾಗೂ ಹುಬ್ಬಳ್ಳಿ-ಧಾರವಾಡ ಮಹಾನಗರದ ಸಮಸ್ತ ನಾಗರೀಕ ಬಂಧುಗಳೇ,

ಈ ದಿನ ಅಂದರೆ **12-02-2013** ರಂದು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸನ್ 2012-13ನೇ ಸಾಲಿನ ಪರಿಷ್ಕೃತ ಆಯ-ವ್ಯಯ ಅಂದಾಜುಗಳು ಮತ್ತು ಸನ್ 2013-14ನೇ ಸಾಲಿನ ಆಯ-ವ್ಯಯ ಅಂದಾಜುಗಳನ್ನು ಅನುಮೋದನೆಗಾಗಿ ಗೌರವದಿಂದ ಮತ್ತು ಅಭಿಮಾನದಿಂದ ತಮ್ಮ ಮುಂದೆ ಮಂಡಿಸುತ್ತಿರುವುದು ಬಹಳ ಸಂತೋಷವಾಗುತ್ತದೆ.

ಸನ್ 2012-13 ಮತ್ತು 2013-14ನೇ ಸಾಲಿನ ಆರ್ಥಿಕ ವರ್ಷಗಳು ಅವಳಿ ನಗರದ ಅಭಿವೃದ್ಧಿಯ ವರ್ಷಗಳೆಂದೇ ಭಾವಿಸಬೇಕಾಗುತ್ತದೆ. ರಾಜ್ಯ ಸರಕಾರದಿಂದ ಎಸ್.ಎಫ್.ಸಿ. ಅನುದಾನ ಸಾಕಷ್ಟು ಪ್ರಮಾಣದಲ್ಲಿ ಅಭಿವೃದ್ಧಿ ಕೆಲಸಗಳಿಗೆ ಬಿಡುಗಡೆಯಾಗುತ್ತಿದ್ದು ನಮ್ಮ ರಾಜ್ಯದ ಪ್ರಸ್ತುತ ,ಸರಕಾರ ಮತ್ತು ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ.ಜಗದೀಶ ಎಸ್. ಶೆಟ್ಟರ್ ಅವಳಿ ನಗರದ

ಅಭಿವೃದ್ಧಿಗೆ ಮುತುವರ್ಜಿವಹಿಸಿ ಅನುದಾನವನ್ನು ಬಿಡುಗಡೆ ಮಾಡುತ್ತಿರುವುದು ತಮಗೆಲ್ಲರಿಗೂ ತಿಳಿದಿರುವ ವಿಷಯ. ಹುಬ್ಬಳ್ಳಿ-ಧಾರವಾಡ ಅವಳಿ ನಗರವು ಅಭಿವೃದ್ಧಿ ಪಥದಲ್ಲಿ ಸಾಗುತ್ತಿದ್ದು ತ್ವರಿತವಾಗಿ ಇನ್ನೂ ಕೆಲವು ಅಗತ್ಯ ಅಭಿವೃದ್ಧಿ ಕೆಲಸಗಳಿಗೆ ರೂಪು ರೇಷೆಗಳನ್ನು ತಯಾರಿಸಿ ಅಭಿವೃದ್ಧಿ ಪಥದಲ್ಲಿ ಸಾಗುವುದು ಅವಶ್ಯವಾಗಿರುತ್ತದೆ.

ಈ ಸಂದರ್ಭದಲ್ಲಿ ಅವಳಿನಗರದ ಸಮಸ್ತ ನಾಗರೀಕರ ಪರವಾಗಿ ಸರಕಾರವನ್ನು ಅಭಿನಂದಿಸಲು ಹೆಮ್ಮೆ ಪಡುತ್ತೇನೆ. ಈ ಕಾರ್ಯದಲ್ಲಿ ಮುತುವರ್ಜಿವಹಿಸಿದ ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ. ಜಗದೀಶ ಎಸ್.ಶೆಟ್ಟರ್, ಸಂಸದರಾದ ಶ್ರೀ. ಪ್ರಹ್ಲಾದ ಜೋಶಿ, ಮಾನ್ಯ ಶಾಸಕರಾದ ಶ್ರೀ. ಚಂದ್ರಕಾಂತ ಬೆಲ್ಲದ, ಶ್ರೀಮತಿ ಸೀಮಾ ಅ. ಮಸೂತಿ, ಶ್ರೀ. ವೀರಭದ್ರಪ್ಪಾ ಹಾಲಹರವಿ, ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ. ವೀರಣ್ಣ ಮತ್ತಿಕಟ್ಟಿ, ಶ್ರೀ. ಮೋಹನ ಲಿಂಬಿಕಾಯಿ, ಶ್ರೀ. ಶ್ರೀನಿವಾಸ ಮಾನೆ, ಶ್ರೀ. ಬಸವರಾಜ ಹೊರಟ್ಟಿ ಮತ್ತು ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ. ವಿಜಯ ಸಂಕೇಶ್ವರ ಇವರೆಲ್ಲರಿಗೂ ಅವಳಿನಗರದ ನಾಗರೀಕರ ಪರವಾಗಿ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮಾನ್ಯರೇ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸನ್ 2013-14ನೇ ಸಾಲಿನ ಆಯ-ವ್ಯಯ ಪತ್ರಿಕೆಯು ಸದಸ್ಯರ ಅಭಿಪ್ರಾಯಗಳನ್ನು ಮತ್ತು

ನಾಗರೀಕರ ನಿರೀಕ್ಷೆಗಳನ್ನು ಪರಿಗಣಿಸಿ ರೂಪುಗೊಂಡಿರುವುದು ಸತ್ಯ ಸಂಗತಿಯಾಗಿರುತ್ತದೆ.

ಇರುವ ಆರ್ಥಿಕ ಇತಿ ಮಿತಿಗಳಲ್ಲಿ **ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು** ಎಂಬ ನೀತಿಗೆ ಬದ್ಧವಾಗಿ ಅವಳ ನಗರದ ಸಮಸ್ತ ನಾಗರೀಕರಿಗೆ ಮೂಲಭೂತ ಸೌಲಭ್ಯ ಒದಗಿಸುವಲ್ಲಿ ಪ್ರಾಮಾಣಿಕವಾದ ಪ್ರಯತ್ನಗಳನ್ನು ಮಾಡಲಾಗಿದೆ.

ಅವಳ ನಗರದ ಸ್ವಚ್ಛತೆ, ಬೀದಿ ದೀಪ, ರಸ್ತೆ, ಚರಂಡಿ ಹಾಗೂ ನೀರು ಸರಬರಾಜುವಿನಂತಹ ಅವಶ್ಯಕ ಸೌಲಭ್ಯಗಳನ್ನು ಸಮಸ್ತ ನಾಗರೀಕರಿಗೆ ಒದಗಿಸುವಲ್ಲಿ ಈ ಅಂದಾಜು ಪತ್ರಿಕೆಯಲ್ಲಿ ಮನಃಪೂರ್ವಕ ಪ್ರಯತ್ನ ಮಾಡಲಾಗಿದೆ. ಸದಸ್ಯರು ಸಾರ್ವಜನಿಕ ಆರೋಗ್ಯ, ಶಿಕ್ಷಣ ಹಾಗೂ ಸಾಮಾಜಿಕ ನ್ಯಾಯ ಸಮಿತಿ, ಸದಸ್ಯರು ನಗರ ಯೋಜನಾ ಅಭಿವೃದ್ಧಿ ಸ್ಥಾಯಿ ಸಮಿತಿ, ಸದಸ್ಯರು ಲೆಕ್ಕಗಳ ಸ್ಥಾಯಿ ಸಮಿತಿ, ಮತ್ತು ಪಾಲಿಕೆಯ ಎಲ್ಲಾ ಸದಸ್ಯರು ಪಕ್ಷ ಬೇಧ ಮರೆತು ನೀಡಿದ ಅಮೂಲ್ಯ ಸಲಹೆ ಸೂಚನೆಗಳು ಸನ್ 2013-14ನೇ ಸಾಲಿನ ಅಂದಾಜು ಪತ್ರಿಕೆ ತಯಾರಿಸುವಲ್ಲಿ ಹೆಚ್ಚು ಸಹಕಾರಿಯಾಗಿವೆ.

ಪೂಜ್ಯ ಮಹಾಪೌರರು ಪ್ರತಿನಿತ್ಯ ಅವಳ ನಗರದ ಅಭಿವೃದ್ಧಿ ಕೆಲಸಗಳ ಮತ್ತು ಆದಾಯ ಮೂಲಗಳ ಬಗ್ಗೆ ಸ್ವತಃ ಕಾಳಜಿವಹಿಸಿ, ಅತ್ಯಂತ ಅಮೂಲ್ಯವಾದ ಸಲಹೆಗಳನ್ನು ತೆರಿಗೆ ನಿರ್ಧಾರಣೆ, ಹಣಕಾಸು ಹಾಗೂ ಅಪೀಲುಗಳ ಸ್ಥಾಯಿ ಸಮಿತಿಗೆ ನೀಡಿದ್ದು ಮಾತ್ರವಲ್ಲದೆ ಎಲ್ಲಾ ಸದಸ್ಯರುಗಳೊಂದಿಗೆ ಪಕ್ಷ ಬೇಧ

ಮರೆತು ಚರ್ಚಿಸಿ ನೀಡಿದ ಅತೀ ಅಮೂಲ್ಯ ಸಲಹೆಗಳು ಈ ಅಂದಾಜು ಪತ್ರಿಕೆ ತಯಾರಿಸುವಲ್ಲಿ ತುಂಬಾ ಸಹಕಾರಿಯಾಗಿರುತ್ತದೆ. ಪೂಜ್ಯ ಮಹಾಪೌರರಿಗೆ ನಾನು ಈ ಸಂದರ್ಭದಲ್ಲಿ ಎಲ್ಲಾ ಸದಸ್ಯರುಗಳ ಪರವಾಗಿ ಅಭಿನಂದನೆಗಳನ್ನು ಗೌರವಪೂರ್ವಕವಾಗಿ ಸಲ್ಲಿಸುತ್ತೇನೆ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯು ಸತತವಾಗಿ ತನ್ನ ನಾಗರೀಕರಿಗೆ ಅತ್ಯಂತ ಪ್ರಾಮಾಣಿಕವಾಗಿ, ಶ್ರದ್ಧೆಯಿಂದ ಪ್ರಗತಿಪರವಾದ ಧ್ಯೇಯೋದ್ಧೇಶಗಳೊಂದಿಗೆ ತನ್ನ ಆರ್ಥಿಕ ಇತಿ ಮಿತಿಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಆಯ-ವ್ಯಯಗಳನ್ನು ತಯಾರಿಸಿದ್ದು, ಒಟ್ಟಾರೆ **ರೂ. 244.66** ಲಕ್ಷಗಳ ಮಿಗತೆ ಆಯ-ವ್ಯಯವನ್ನು ತಮ್ಮ ಮುಂದೆ ಮಂಡಿಸಲು ಹರ್ಷಿಸುತ್ತೇನೆ. ಸನ್ 2013-14ನೇ ಸಾಲಿನ ಆಯ-ವ್ಯಯದ ಮುಖ್ಯ ಅಂಶಗಳ ಸಂಕ್ಷಿಪ್ತ ವಿವರ ಈ ಕೆಳಗಿನಂತಿದೆ.

# ಹುಬ್ಬಳ್ಳಿ – ಧಾರವಾಡ ಮಹಾನಗರ ಪಾಲಿಕೆ –2012–13 ರ ಪರಿಷ್ಕೃತ ಹಾಗೂ 2013–14ನೇ ಸಾಲಿನ ಆಯ– ವ್ಯಯ ಅಂದಾಜುಗಳ ಸಾರಾಂಶ

# REVISED BUDGET ESTIMATES FOR 2012-2013
# BUDGET SUMMARY STATEMENT FOR THE YEAR 2013-14

## Hubli-Dharwad -Municipal Corporation

ರೂ. ಲಕ್ಷಗಳಲ್ಲಿ
Rs. in Lakhs

| ಕ್ರ.ಮ ಸಂಖ್ಯೆ SL No | ವಿವರಣೆ Particulars | ವಾಸ್ತವಿಕ ಲೆಕ್ಕಗಳು Actual accounts for 2011-12 | ಆಯ–ವ್ಯಯ ಅಂದಾಜುಗಳು Budget Estimate for 2012-13 | ವಾಸ್ತವಿಕ ಲೆಕ್ಕಗಳು Actuals upto Oct-12 | ಪರಿಷ್ಕೃತ ಅಂದಾಜುಗಳು Revised Estimate for 2012-13 | ಆಯ–ವ್ಯಯ ಅಂದಾಜುಗಳು Budget Estimate for 2013-14 |
|---|---|---|---|---|---|---|
| A | ಪ್ರಾರಂಭದ ಶಿಲ್ಕು Opening Balance | **1320.06** | **159.69** | **3795.52** | **3795.52** | **1802.52** |
| | | | | | | |
| B | ರಾಜಸ್ವ ಖಾತೆ Revenue Account | | | | | |
| | B1. ರಾಜಸ್ವ ಆದಾಯ Revenue Receipts | 15949.53 | 18005.22 | 9963.85 | 20107.40 | 24510.46 |
| | B2. ರಾಜಸ್ವ ವೆಚ್ಚ Revenue Payments | 12034.31 | 15170.71 | 7421.00 | 15843.35 | 17445.35 |
| | ಮಿಗತೆ / (ಕೊರತೆ) **Cash surplus/Deficit on revenue account** | **3915.22** | **2834.51** | **2542.85** | **4264.05** | **7065.11** |
| | | | | | | |
| C | ಬಂಡವಾಳ ಖಾತೆ Capital Account | | | | | |
| | C1. ಬಂಡವಾಳ ಸ್ವೀಕೃತಿಗಳು Capital Receipts | 0.00 | 1125.00 | 2.01 | 250.00 | 250.00 |
| | C2. ಬಂಡವಾಳ ಪಾವತಿಗಳು Capital Payments | 2629.48 | 4195.00 | 1764.92 | 6651.00 | 9116.92 |
| | ಮಿಗತೆ / (ಕೊರತೆ) **Cash surplus/Deficit on Capital account** | **(2629.48)** | **(3070.00)** | **(1762.91)** | **(6401.00)** | **(8866.92)** |
| | | | | | | |
| D | ಅಸಾಮಾನ್ಯ ಖಾತೆ Extra Ordinary accounts | | | | | |
| | D1.ಅಸಾಮಾನ್ಯ ಸ್ವೀಕೃತಿಗಳು Extraordinary Receipts | 3158.40 | 5015.57 | 1046.67 | 4209.06 | 4440.63 |
| | D2.ಅಸಾಮಾನ್ಯ ಪಾವತಿಗಳು Extraordinary Payments | 1968.68 | 4801.29 | 1085.37 | 4065.11 | 4196.68 |
| | ಮಿಗತೆ / (ಕೊರತೆ) **Cash surplus/Deficit on Extra ordinary account** | **1189.72** | **214.28** | **(38.70)** | **143.95** | **243.95** |
| | | | | | | |
| E | ಒಟ್ಟು ಮಿಗತೆ / (ಕೊರತೆ) **Total Cash surplus/Deficit** | **2475.46** | **(21.21)** | **741.24** | **(1993.00)** | **(1557.86)** |

| | | | | | |
|---|---|---|---|---|---|
| ಅಂತಿಮ ಶಿಲ್ಕು **Closing Balance (A+E)** | **3795.52** | **138.48** | **4536.76** | **1802.52** | **244.66** |

# ಹಣಕಾಸು ಆಯ-ವ್ಯಯ ನಿರ್ವಹಣೆ

ಸನ್ 2013-14ನೇ ಸಾಲಿನ ಆಯ-ವ್ಯಯದ ನಿರೀಕ್ಷಿತ ರಾಜಸ್ವ ಆದಾಯ **ರೂ. 24510.46** ಲಕ್ಷಗಳನ್ನು ನಿರೀಕ್ಷಿಸಲಾಗಿದ್ದು, ರಾಜಸ್ವ ವೆಚ್ಚವನ್ನು **ರೂ. 17445.35** ಲಕ್ಷಗಳಿಗೆ ಮಿತಿಗೊಳಿಸಿ ರಾಜಸ್ವ ಖಾತೆಯಲ್ಲಿ **ರೂ.** 7065.11 ಲಕ್ಷಗಳ ಮಿಗತೆಯನ್ನು ಅಂದಾಜಿಸಲಾಗಿದೆ.

ಸನ್ 2013-14ನೇ ಸಾಲಿನ ಅಯ-ವ್ಯಯದ ಬಂಡವಾಳ ಖಾತೆಯಲ್ಲಿ **ರೂ. 250** ಲಕ್ಷಗಳ ಸ್ವೀಕೃತಿಯನ್ನು ಅಂದಾಜಿಸಲಾಗಿದ್ದು, **ರೂ. 9116.92** ಲಕ್ಷಗಳನ್ನು ಹೊಸ ಆಸ್ತಿಗಳ ನಿರ್ಮಾಣಕ್ಕಾಗಿ ಮತ್ತು ಬಂಡವಾಳ ವೆಚ್ಚಕ್ಕಾಗಿ ವ್ಯಯಿಸಲು ನಿರ್ಧರಿಸಲಾಗಿದೆ.

ಬಂಡವಾಳ ಖಾತೆಯಲ್ಲಿ ಕೊರತೆಯಾಗುವ **ರೂ. 8866.92** ಲಕ್ಷಗಳನ್ನು ಆರಂಭ ಶಿಲ್ಕು **ರೂ. 1802.52** ಮತ್ತು ರಾಜಸ್ವ ಖಾತೆಯಲ್ಲಿನ ಮಿಗತೆ **ರೂ. 7065.11** ಲಕ್ಷಗಳೊಂದಿಗೆ ಹೊಂದಾಣಿಕೆ ಮಾಡಿ ವೆಚ್ಚಗಳನ್ನು ಭರಿಸಲಾಗುವುದು. ಆದುದರಿಂದ ಯಾವುದೇ ಬಾಹ್ಯ ಸಾಲವನ್ನು ಪಡೆಯದೇ, ಯಾವುದೇ ಹೊಸ ತೆರಿಗೆಯನ್ನೂ ವಿಧಿಸದೆ, ರಾಜಸ್ವ ಖಾತೆಯ ಮಿಗತೆ ಹಾಗೂ ಆರಂಭಿಕ ಶಿಲ್ಕುಗಳಿಂದ ಸರಿದೂಗಿಸಲಾಗಿದೆ. ಅದೇ ರೀತಿಯಾಗಿ ಅಸಾಮಾನ್ಯ ಖಾತೆಯಲ್ಲಿ **ರೂ. 4440.63** ಲಕ್ಷಗಳ ಸ್ವೀಕೃತಿಯನ್ನು ನಿರೀಕ್ಷಿಸಿದ್ದು, ಅಸಾಮಾನ್ಯ ಪಾವತಿಗಳು **ರೂ. 4196.68** ಲಕ್ಷ ಆಗಿರುತ್ತದೆ. ಅಂತಿಮವಾಗಿ **ರೂ. 244.66** ಲಕ್ಷಗಳ ಮಿಗತೆಯ ಆಯ-ವ್ಯಯವನ್ನು ತಯಾರಿಸಲಾಗಿದೆ.

**2013-14ನೇ ಸಾಲಿನಲ್ಲಿ ರೂ. 24510.46 ಲಕ್ಷಗಳ ಸ್ವೀಕೃತಿಯನ್ನು ರಾಜಸ್ವ ಖಾತೆಯಲ್ಲಿ ಹಾಗೂ ರೂ. 250 ಲಕ್ಷಗಳ ಸ್ವೀಕೃತಿಯನ್ನು ಬಂಡವಾಳ ಖಾತೆಯಲ್ಲಿ**

**ಹೀಗೆ ಒಟ್ಟು ರೂ. 24760.46 ಲಕ್ಷಗಳ ಆದಾಯವನ್ನು ಈ ಕೆಳಗಿನ ಕಾರ್ಯಕ್ರಮಗಳಿಂದ ಮತ್ತು ಇಲಾಖೆಗಳಿಂದ ನಿರೀಕ್ಷಿಸಲಾಗಿದೆ.**

## ಪಾಲಿಕೆಯ ಆದಾಯ ಸ್ವೀಕೃತಿಗಳು

1. **ಕಂದಾಯ ಇಲಾಖೆ :-** ಆಸ್ತಿ ತೆರಿಗೆಯಿಂದ ಒಟ್ಟು **ರೂ. 3975.86** ಲಕ್ಷಗಳನ್ನು, ಘನತ್ಯಾಜ್ಯ ವಸ್ತು ನಿರ್ವಹಣೆ ಮತ್ತು ನೈರ್ಮಲ್ಯ ಉಪಕರಗಳಿಂದ **ರೂ. 653** ಲಕ್ಷಗಳು, ಜಾಹೀರಾತು ತೆರಿಗೆಯಿಂದ **ರೂ. 138.30** ಲಕ್ಷಗಳು ಹಾಗೂ **ರೂ. 50** ಲಕ್ಷಗಳನ್ನು ಮೂಲಭೂತ ಸೌಕರ್ಯಗಳ ಉಪಕರ ಎಂದು ಪಡೆಯುವ ಗುರಿ ಹೊಂದಲಾಗಿದೆ. ಪ್ರಸ್ತುತ ಆಯ-ವ್ಯಯದಲ್ಲಿ ಇನ್ನೂ ತೆರಿಗೆಗೆ ಒಳಪಡದ ವಸತಿ ಹಾಗೂ ವಾಣಿಜ್ಯ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತರುವ ಗುರಿಯನ್ನು ಹೊಂದಲಾಗಿದೆ. ಈ ಕುರಿತು ಕಟ್ಟು-ನಿಟ್ಟಿನ ಕ್ರಮ ಜರುಗಿಸಲಾಗುವುದು. 2013-14ನೇ ಸಾಲಿನಲ್ಲಿ ಆಸ್ತಿ ತೆರಿಗೆಯನ್ನು ಸಂಪೂರ್ಣವಾಗಿ ವಸೂಲಿ ಮಾಡಲು ಕೂಡಾ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ.
2. **ನಗರ ಯೋಜನೆ :-** ನಗರ ಯೋಜನೆ ಶೀರ್ಷಿಕೆ ಅಡಿಯಲ್ಲಿ ಒಟ್ಟು **ರೂ. 1954.10** ಲಕ್ಷಗಳ ಆದಾಯವನ್ನು ನಿರೀಕ್ಷಿಸಲಾಗಿದೆ. ನಗರ ಯೋಜನೆ ಕಾರ್ಯಕ್ರಮದಲ್ಲಿ ನಿಯಮಬದ್ಧ ಕಾನೂನು ಕ್ರಮ ಜಾರಿಗೊಳಿಸಿ, ಕಟ್ಟಡ ಅನುಮತಿ ಕಡ್ಡಾಯಗೊಳಿಸಿ ಆದಾಯವನ್ನು ಹೆಚ್ಚಿಸಲು ಮತ್ತು

ಅವಶ್ಯವಿದ್ದಲ್ಲಿ ಉಪವಿಧಿಗಳನ್ನು ಮಾರ್ಪಡಿಸಿ, ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ.

3. **ಕೈಗಾರಿಕೆ ಉದ್ದಿಮೆ ಪರವಾನಿಗೆ** :- ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವ್ಯಾಪಾರ, ವಹಿವಾಟು ಹಾಗೂ ಹೊಟೇಲ್ ಉದ್ದಿಮೆದಾರರಿಂದ **ರೂ. 160** ಲಕ್ಷಗಳನ್ನು ಪರವಾನಿಗೆ ಶುಲ್ಕದಿಂದ ಸಂಗ್ರಹಿಸುವ ಗುರಿ ಹೊಂದಲಾಗಿದೆ. ಈ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಒಟ್ಟು **ರೂ. 197.75** ಲಕ್ಷಗಳನ್ನು ನಿರೀಕ್ಷಿಸಲಾಗಿದೆ.

4. **ವ್ಯಾಪಾರ ಮಳಿಗೆ ಸ್ಥಿರಾಸ್ತಿ :-** ಮಹಾನಗರ ಪಾಲಿಕೆಯ ವಿವಿಧ ಸ್ಥಳಗಳಲ್ಲಿ ಹೊಂದಿರುವ ವ್ಯಾಪಾರ ಮಳಿಗೆಗಳಿಂದ **ರೂ. 62.50** ಲಕ್ಷಗಳನ್ನು ಸಂಗ್ರಹಿಸುವ ಗುರಿ ಹೊಂದಲಾಗಿದೆ.

5. **ವಾಣಿಜ್ಯ ಸಂಕೀರ್ಣಗಳಿಂದ ಬಾಡಿಗೆ** :- ಅವಳಿ ನಗರದ ಪಾಲಿಕೆಯ ಒಡೆತನದ ವಿವಿಧ ವಾಣಿಜ್ಯ ಸಂಕೀರ್ಣಗಳಿಂದ 2013-14 ನೇ ಸಾಲಿಗೆ **ರೂ. 418.12** ಲಕ್ಷಗಳ ಆದಾಯವನ್ನು ನಿರೀಕ್ಷಿಸಲಾಗಿದೆ. ನೆಲಗುತ್ತಿಗೆ ವಸತಿ ಬಾಡಿಗೆಯಿಂದ **ರೂ. 50** ಲಕ್ಷಗಳನ್ನು ಮತ್ತು ನೆಲಗುತ್ತಿಗೆ ವಾಣಿಜ್ಯ ಬಾಡಿಗೆಯಿಂದ **ರೂ. 20** ಲಕ್ಷಗಳನ್ನು ನಿರೀಕ್ಷಿಸಲಾಗಿದೆ.

6. **ರಸ್ತೆ ಕಡಿತದ ಶುಲ್ಕ** :- ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನೀರು ಸರಬರಾಜು ಮತ್ತು ಇತರ ಸಾರ್ವಜನಿಕ

ಕಾಮಗಾರಿಗಳಗಾಗಿ ರಸ್ತೆಗಳನ್ನು ಕಡಿಯುತ್ತಿದ್ದು, ಸದರ ರಸ್ತೆಗಳನ್ನು ಪುನ: ಸರಿಪಡಿಸಲು ರಸ್ತೆ ಕಡಿಯುವ ಶುಲ್ಕವೆಂದು ವಸೂಲಿ ಮಾಡಲಾಗುತ್ತಿದೆ. ಈ ಲೆಕ್ಕ ಶೀರ್ಷಿಕೆಯಲ್ಲಿ **ರೂ.** 115 ಲಕ್ಷಗಳ ಆದಾಯವನ್ನು ನಿರೀಕ್ಷಿಸಲಾಗಿದೆ.

7. **<u>ಜನನ ಮರಣ ಪ್ರಮಾಣ ಪತ್ರ</u>** :- ಆರೋಗ್ಯ ಇಲಾಖೆಯಿಂದ ಜನನ ಮರಣ ಪ್ರಮಾಣ ಪತ್ರಗಳನ್ನು ನೀಡಲಾಗುತ್ತಿದ್ದು, 2013-14ನೇ ಸಾಲಿಗೆ ಈ ಶೀರ್ಷಿಕೆಯಿಂದ **ರೂ.** 77 ಲಕ್ಷಗಳ ಆದಾಯವನ್ನು ನಿರೀಕ್ಷಿಸಲಾಗಿದೆ. ಪಾಲಿಕೆಯ ವೈದ್ಯಕೀಯ ಆಸ್ಪತ್ರೆಗಳಿಂದ **ರೂ.** 40 ಲಕ್ಷಗಳ ಆದಾಯವನ್ನು ನಿರೀಕ್ಷಿಸಲಾಗಿದೆ.

8. **<u>ಕಂದಾಯ ಸಾಮಾನ್ಯ</u>** :- ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸ್ಥಿರಾಸ್ಥಿ ವರ್ಗಾವಣೆ, ಶೀರ್ಷಿಕೆ ಅಡಿಯಲ್ಲಿ ಜಿಲ್ಲಾ ನೊಂದಣಾಧಿಕಾರಿಗಳ ಕಛೇರಿಯಿಂದ **ರೂ.** 83 ಲಕ್ಷಗಳ ಆದಾಯವನ್ನು ನಿರೀಕ್ಷಿಸಲಾಗಿದೆ.

9. **<u>ದಂಡಗಳ ವಸೂಲಿ</u>** :- ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆದಾರರು, ಪೂರೈಕೆದಾರರು ನಿಯಮಗಳನ್ನು ಉಲ್ಲಂಘಿಸಿದ ಸಂದರ್ಭಗಳಲ್ಲಿ ದಂಡಗಳನ್ನು ವಿಧಿಸಲಾಗುತ್ತಿದ್ದು ಅದರಂತೆ **ರೂ.160** ಲಕ್ಷಗಳ ವಸೂಲಾತಿಯನ್ನು ಅಂದಾಜಿಸಲಾಗಿದೆ.

10.**<u>ಇತರೆ ಸ್ವೀಕೃತಿಗಳು </u>**:- ಬ್ಯಾಂಕ ಬಡ್ಡಿಗಳು ಮತ್ತು ಇತರೆ ಮೂಲಗಳಿಂದ 2013-14 ನೇ ಸಾಲಿಗೆ ಒಟ್ಟು **ರೂ. 243.61** ಲಕ್ಷಗಳ ಆದಾಯವನ್ನು ನಿರೀಕ್ಷಿಸಲಾಗಿದೆ.

**<u>ಹೀಗೆ ಸನ್ 2013-14 ನೇ ಸಾಲಿನ ಅಂದಾಜು ಪತ್ರಿಕೆಯಲ್ಲಿ ರೂ. 8237.79 ಲಕ್ಷಗಳ ಪಾಲಿಕೆಯ ಸ್ವಂತ ಆದಾಯವನ್ನು ನಿರೀಕ್ಷಿಸಲಾಗಿದೆ.</u>**

11. **<u>ವಿದ್ಯುತ್ ಅನುದಾನ</u>** :- ಮಹಾನಗರ ಪಾಲಿಕೆಯ ವ್ಯಾಪ್ತಿಯ ವಿದ್ಯುತ್ ದೀಪಗಳ ಮತ್ತು ನೀರು ಸರಬರಾಜು ಮತ್ತು ವಿತರಣಾ ವ್ಯವಸ್ಥೆಗೆ ಸಂಬಂಧಿಸಿದ ವಿದ್ಯುತ್ ಶುಲ್ಕ ಪಾವತಿಗೆ ಎಸ್.ಎಫ್.ಸಿ. ಅನುದಾನದ ಅಡಿಯಲ್ಲಿ ಒಟ್ಟು **ರೂ. 2856.57** ಲಕ್ಷಗಳನ್ನು ಸರಕಾರದಿಂದ ನಿರೀಕ್ಷಿಸಲಾಗಿದೆ.

12.**<u>ವೇತನ ಅನುದಾನ</u>** :- ಸನ್ 2013-14 ನೇ ಸಾಲಿನಲ್ಲಿ ವೇತನ, ನಿವೃತ್ತಿ ವೇತನ ಮತ್ತು ನಿವೃತ್ತಿ ಸೌಲಭ್ಯಗಳ ಪಾವತಿಗಾಗಿ **ರೂ. 7815.93** ಲಕ್ಷಗಳನ್ನು ರಾಜ್ಯ ಎಸ್.ಎಫ್.ಸಿ. ಅನುದಾನದ ಅಡಿಯಲ್ಲಿ ನಿರೀಕ್ಷಿಸಲಾಗಿದೆ. ಬಿಡುಗಡೆಯಾಗುವ ಅನುದಾನವನ್ನು ನಿಗದಿತ ಉದ್ದೇಶಕ್ಕಾಗಿ ಮಾತ್ರ ಬಳಸಲಾಗುವದು.

13.**<u>ಮಾನ್ಯ ಮುಖ್ಯ ಮಂತ್ರಿಯವರ ವಿಶೇಷ ಎಸ್.ಎಫ್.ಸಿ. ಮುಕ್ತ ನಿಧಿ ಅನುದಾನ</u>** :- ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ

ಬಹು ವರ್ಷಗಳಿಂದ ವಂಚಿತವಾದ ಮೂಲಭೂತ ಸೌಕರ್ಯಗಳಾದ ಒಳಚರಂಡಿ, ರಸ್ತೆ, ತೆರೆದ ಚರಂಡಿ, ಮುಂತಾದ ಕಾಮಗಾರಿಗಳನ್ನು ಕೈಗೊಳ್ಳಲು **ರೂ.** **2545** ಲಕ್ಷಗಳ ಅನುದಾನವನ್ನು ಬಿಡುಗಡೆಗೆ ಆದೇಶಿಸಲಾಗಿದೆ ಮತ್ತು ನಿಗದಿತ ಕಾಮಗಾರಿಗಳಿಗೆ ಈಗಾಗಲೇ ಸರಕಾರದಿಂದ ಆಡಳಿತಾತ್ಮಕ ಮಂಜೂರಾತಿ ದೊರಕಿರುತ್ತದೆ. **ರೂ. 2545** ಲಕ್ಷಗಳ ಅನುದಾನದಲ್ಲಿ ಈಗಾಗಲೇ **ರೂ. 900** ಲಕ್ಷಗಳನ್ನು ಬಿಡುಗಡೆ ಮಾಡಿ ಸರಕಾರವು ಆದೇಶಿಸಿರುತ್ತದೆ. ಆದುದರಿಂದ **ರೂ. 900** ಲಕ್ಷಗಳನ್ನು 2012-13 ರ ಪರಿಷ್ಕೃತ ಅಂದಾಜು ಆಯ-ವ್ಯಯದಲ್ಲಿ ಮತ್ತು ಬಾಕಿ ಉಳಿದ **ರೂ. 1645** ಲಕ್ಷಗಳನ್ನು 2013-14 ನೇ ಸಾಲಿನ ಆಯ-ವ್ಯಯದಲ್ಲಿ ಅಳವಡಿಸಿಕೊಳ್ಳಲಾಗಿದೆ. ಆದುದರಿಂದ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಪರವಾಗಿ ಮತ್ತು ಅವಳಿ ನಗರದ ಸಮಸ್ತ ನಾಗರೀಕರ ಪರವಾಗಿ ಮಾನ್ಯ ಮುಖ್ಯ ಮಂತ್ರಿಯವರಿಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಅರ್ಪಿಸಲು ಹರ್ಷಿಸುತ್ತೇನೆ.

14.**ಎಸ್.ಎಫ್.ಸಿ. ಮುಕ್ತನಿಧಿ ಅನುದಾನ** :- ಅವಳಿ ನಗರಗಳ ಅಭಿವೃದ್ಧಿಗಾಗಿ 2013-14 ನೇ ಸಾಲಿನಲ್ಲಿ **ರೂ. 2479.56** ಲಕ್ಷಗಳ ಅನುದಾನವನ್ನು ನಿರೀಕ್ಷಿಸಲಾಗಿದೆ. ಸರಕಾರದಿಂದ ಬಿಡುಗಡೆಯಾಗುವ

ಮುಕ್ತ ನಿಧಿ ಅನುದಾನವನ್ನು ಸರಕಾರದ ಮಾರ್ಗಸೂಚಿಗಳಂತೆ ಅವಳಿ ನಗರದ ಸಮಗ್ರ ಅಭಿವೃದ್ಧಿಗಾಗಿ ಬಳಸಲಾಗುವುದು.

15.**<u>13ನೇ ಹಣಕಾಸು ಅನುದಾನ</u>** :- 2013-14 ನೇ ಸಾಲಿನಲ್ಲಿ ಸರಕಾರದಿಂದ **ರೂ. 1375.61** ಲಕ್ಷಗಳ ಅನುದಾನವನ್ನು ನಿರೀಕ್ಷಿಸಲಾಗಿದ್ದು, ಬಿಡುಗಡೆಯಾಗುವ ಅನುದಾನವನ್ನು ಸರಕಾರದ ಮಾರ್ಗಸೂಚಿಗಳಂತೆ ಘನತ್ಯಾಜ್ಯ ವಿಲೇವಾರಿ, ರಸ್ತೆ ಮತ್ತು ಸೇತುವೆಗಳ ನಿರ್ವಹಣೆ, ಲೆಕ್ಕ ಪತ್ರಗಳ ನಿರ್ವಹಣೆ, ಉದ್ಯಾನವನಗಳ ಅಭಿವೃದ್ಧಿ, ಬೀದಿ ದೀಪಗಳ ಅಭಿವೃದ್ಧಿ, ಒಳಚರಂಡಿ ಮತ್ತು ತೆರೆದ ಚರಂಡಿ ಹಾಗೂ ನೀರು ಸರಬರಾಜು ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸಲು ಉಪಯೋಗಿಸಲಾಗುವುದು.

16.**<u>ಸ್ಥಳೀಯ ಶಾಸಕರ ಹಾಗೂ ಸಂಸದರ ಅನುದಾನ</u> :-** ಶಾಸಕರ ಮತ್ತು ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ **ರೂ. 100** ಲಕ್ಷಗಳ ಅನುದಾನವನ್ನು ನಿರೀಕ್ಷಿಸಲಾಗಿದ್ದು, ಅನುದಾನವನ್ನು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸಿಕೊಳ್ಳಲಾಗುವುದು.

17. **<u>ಬಂಡವಾಳ ಸ್ವೀಕೃತಿಗಳು</u>** :- ಪಾಲಿಕೆಯ 2013-14 ನೇ ಸಾಲಿನ ಆಯ-ವ್ಯಯದಲ್ಲಿ **ರೂ. 250** ಲಕ್ಷಗಳ ಬಂಡವಾಳ ಸ್ವೀಕೃತಿಯನ್ನು ನಿರೀಕ್ಷಿಸಲಾಗಿದೆ. **ರೂ. 200** ಲಕ್ಷಗಳನ್ನು ಈ ಹಿಂದೆ ಸಾರ್ವಜನಿಕ

ಗ್ರಂಥಾಲಯ ಇಲಾಖೆಗೆ ಹಸ್ತಾಂತರಿಸಲಾದ ಕಟ್ಟಡ ಮತ್ತು ಭೂಮಿಯ ಮೌಲ್ಯದ ಮೊತ್ತ ಪಾಲಿಕೆಗೆ ಬರಬೇಕಾಗಿದ್ದು, 2013-14 ನೇ ಸಾಲಿನಲ್ಲಿ ಸ್ವೀಕೃತಿಯನ್ನು ನಿರೀಕ್ಷಿಸಲಾಗಿದೆ. ಹಾಗೂ ಬಂಡವಾಳ ಲೆಕ್ಕ ಶಿರ್ಷಿಕೆಯಲ್ಲಿ **ರೂ. 50** ಲಕ್ಷಗಳ ಇತರೆ ಸ್ವೀಕೃತಿಯನ್ನು ನಿರೀಕ್ಷಿಸಲಾಗಿದೆ. ಹೀಗೆ ಬಂಡವಾಳ ಖಾತೆಯಲ್ಲಿ ಒಟ್ಟು **ರೂ. 250** ಲಕ್ಷಗಳ ಸ್ವೀಕೃತಿಯನ್ನು ನಿರೀಕ್ಷಿಸಲಾಗಿದೆ. ಆದುದರಿಂದ 2013-14 ನೇ **ಸಾಲಿನ ಅಂದಾಜು ಪತ್ರಿಕೆಯಲ್ಲಿ ರಾಜಸ್ವ ಮತ್ತು ಬಂಡವಾಳ ಸ್ವೀಕೃತಿ ಒಟ್ಟು ಸೇರಿ ರೂ. 24760.46 ಲಕ್ಷಗಳ ಸ್ವೀಕೃತಿಗಳನ್ನು ನಿರೀಕ್ಷಿಸಲಾಗಿದೆ.**

## ವೆಚ್ಚಗಳು

1. **ಆಡಳಿತ ನಿರ್ವಹಣೆ ಮತ್ತು ಮಾನವ ಸಂಪನ್ಮೂಲಗಳು :-** 2013-14 ನೇ ಸಾಲಿನಲ್ಲಿ ಮಾನವ ಸಂಪನ್ಮೂಲದ ವೇತನ, ಪಿಂಚಣಿ, ಮತ್ತು ನಿವೃತ್ತಿ ಸೌಲಭ್ಯಗಳ ಪಾವತಿಗಾಗಿ **ರೂ. 7815.93** ಲಕ್ಷಗಳನ್ನು ವ್ಯಯಿಸಲು ಅಂದಾಜಿಸಲಾಗಿದೆ. 2013-14 ನೇ ಸಾಲಿನಲ್ಲಿ ಪಾಲಿಕೆಯು ತನ್ನ ಸಿಬ್ಬಂದಿಯ ಕಾರ್ಯತತ್ಪರತೆ ಮತ್ತು ಸಾಮರ್ಥ್ಯವನ್ನು ಹೆಚ್ಚಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.

2. **<u>ಹೊರ ಗುತ್ತಿಗೆ ಮಾನವ ಸಂಪನ್ಮೂಲಗಳು</u>** :- ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ ಸಾಕಷ್ಟು ಹುದ್ದೆಗಳು ಖಾಲಿ ಇದ್ದು ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಗುತ್ತಿಗೆ ಆಧಾರದ ಮೇಲೆ ಬಾಹ್ಯ ಮೂಲದಿಂದ ಮಾನವ ಸಂಪನ್ಮೂಲಗಳನ್ನು ಪಡೆಯಲು **ರೂ. 331.69** ಲಕ್ಷಗಳನ್ನು ಮೀಸಲಿಡಲಾಗಿದೆ. ಈ ವೆಚ್ಚ ಶೀರ್ಷಿಕೆಯಲ್ಲಿ ಡಾಟಾ ಎಂಟ್ರಿ, ಹೊರಗುತ್ತಿಗೆ ದಾಖಲೆಗಳ ನಿರ್ವಹಣೆ, ಕಂಟ್ರೋಲ್ ರೂಮ್, ಡಾಟಾ ಬೇಸ್ ಮುಂತಾದ ಕೆಲಸಗಳನ್ನು ನಿರ್ವಹಿಸಲಾಗುವುದು.

3. **<u>ಸಾಲ ಮರುಪಾವತಿ</u>** :- 2013-14 ನೇ ಸಾಲಿನಲ್ಲಿ ಸಾಲ ಮತ್ತು ಬಡ್ಡಿ ಮರುಪಾವತಿಗಾಗಿ ಒಟ್ಟು **ರೂ. 13** ಲಕ್ಷಗಳನ್ನು ಮೀಸಲಿಡಲಾಗಿದೆ.

4. **<u>ವಂತಿಕೆಗಳು</u>** :- ಸರಕಾರದಿಂದ ಇತರ ಕಾರ್ಯಕ್ರಮ ಮತ್ತು ಇತರ ಯೋಜನೆಗಳಾದ (KUWSIP) ಕರ್ನಾಟಕ ನಗರ ನೀರು ಮತ್ತು ಒಳಚರಂಡಿ ಮೂಲಭೂತ ಸೌಕರ್ಯಗಳ ಯೋಜನೆ ಅನುಷ್ಠಾನಕ್ಕಾಗಿ ಮತ್ತು ಇತರೆ ಯಾವುದೇ ಪಾಲುದಾರ ಯೋಜನೆಗೆ ಪಾಲಿಕೆಯ ವಂತಿಕೆ ಪಾವತಿಗಾಗಿ **ರೂ. 500** ಲಕ್ಷಗಳನ್ನು ಮೀಸಲಿರಿಸಲಾಗಿದೆ.

5. **<u>ಸಾರ್ವಜನಿಕ ಮೂಲಭೂತ ಆಸ್ತಿಗಳ ನಿರ್ವಹಣೆ ದುರಸ್ಥಿ ಹಾಗೂ ನಿರ್ಮಾಣ</u>** :- ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ನಾಗರೀಕರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು, ದುರಸ್ಥಿ ಮತ್ತು

ನಿರ್ವಹಣೆಗಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಪ್ರಸ್ತುತ ಆಯ-ವ್ಯಯದಲ್ಲಿ ಅದರಂತೆ ವೆಚ್ಚ ಭರಿಸಲು ನಿರ್ಧರಿಸಲಾಗಿದೆ.

ಪಾಲಿಕೆಯ ಸ್ಥಿರಾಸ್ತಿಗಳ (ಕಟ್ಟಡ) ನಿರ್ವಹಣೆಗಾಗಿ **ರೂ. 65** ಲಕ್ಷ, ಅವಳಿ ನಗರದ ಪ್ರಮುಖ ರಸ್ತೆಗಳ ದುರಸ್ಥಿಗಾಗಿ **ರೂ. 250** ಲಕ್ಷ, ರಸ್ತೆ ಬದಿಯ ಚರಂಡಿ ನಿರ್ವಹಣೆಗಾಗಿ **ರೂ. 170** ಲಕ್ಷ, ಒಳಚರಂಡಿ ವ್ಯವಸ್ಥೆ ಮತ್ತು ದುರಸ್ಥಿಗಾಗಿ **ರೂ. 150** ಲಕ್ಷ ಮತ್ತು **ರೂ. 9116.92** ಲಕ್ಷಗಳನ್ನು ಹೊಸ ಆಸ್ತಿಗಳ ನಿರ್ಮಾಣ ಹಾಗೂ ಸ್ಥಿರಾಸ್ತಿ ಕಾಮಗಾರಿಗಳಿಗೆ ಬಂಡವಾಳ ಖಾತೆಯಲ್ಲಿ ವೆಚ್ಚ ಭರಿಸಲು ಅವಕಾಶ ಕಲ್ಪಿಸಲಾಗಿದೆ. ಅವುಗಳಲ್ಲಿ ಮುಖ್ಯವಾಗಿ **ರೂ. 2262** ಲಕ್ಷಗಳು ರಸ್ತೆ ಅಭಿವೃದ್ಧಿಗಾಗಿ, **ರೂ. 468.18** ಲಕ್ಷಗಳನ್ನು ಕಟ್ಟಡ ಕಾಮಗಾರಿಗಾಗಿ ಹಾಗೂ **ರೂ. 95** ಲಕ್ಷಗಳನ್ನು ಪಾದಚಾರಿ ರಸ್ತೆ ನಿರ್ಮಾಣಕ್ಕಾಗಿ ವ್ಯಯಿಸಲು ಉದ್ದೇಶಿಸಲಾಗಿದೆ. ನಗರದ ಒಳ ರಸ್ತೆಗಳು ಹಾಗೂ ಹೊಸ ಬಡಾವಣೆಗಳ ರಸ್ತೆಗಳಿಗೆ ಹಂತ ಹಂತವಾಗಿ ಡಾಂಬರೀಕರಣಕ್ಕೆ ಹೆಚ್ಚಿನ ಒತ್ತು ನೀಡಲು ಉದ್ದೇಶಿಸಲಾಗಿದೆ, ನಿರೀಕ್ಷಿತ ಹೆಚ್ಚುವರಿ ಆದಾಯದ ಅನುಗುಣವಾಗಿ **ರೂ. 584** ಲಕ್ಷಗಳನ್ನು ಆಸ್ತಿಗಳ ನಿರ್ಮಾಣಕ್ಕಾಗಿ ಕಾಯ್ದಿರಿಸಲಾಗಿದೆ.

6. **<u>ಪೌರ ಸೌಕರ್ಯಗಳ ಒಳಚರಂಡಿ ಯೋಜನೆ</u> :-** ಈ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಹುಬ್ಬಳ್ಳಿ-ಧಾರವಾಡ ಅವಳಿ ನಗರದಲ್ಲಿ ಒಳಚರಂಡಿ

ವ್ಯವಸ್ಥೆಯನ್ನು ಹೊಂದುವ ದೃಷ್ಟಿಯಿಂದ 2013-14 ನೇ ಸಾಲಿನ ಆಯ-ವ್ಯಯದಲ್ಲಿ **ರೂ. 560.72** ಲಕ್ಷಗಳನ್ನು ವಿನಿಯೋಗಿಸುವ ಗುರಿ ಹೊಂದಲಾಗಿದೆ. ಮಳೆ ನೀರು, ತೆರೆದ ಚರಂಡಿ ನಿರ್ಮಾಣಕ್ಕಾಗಿ **ರೂ. 777.72** ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

7. **<u>ಸಾರ್ವಜನಿಕ ಶೌಚಾಲಯ</u>** :- ಅವಳ ನಗರದ ನಾಗರೀಕರಿಗೆ ಅನುಕೂಲವಾಗುವಂತೆ ವಿವಿಧ ಸ್ಥಳಗಳಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಿಸಲು **ರೂ. 100** ಲಕ್ಷಗಳ ಅವಕಾಶ ಆಯ-ವ್ಯಯದಲ್ಲಿ ಕಲ್ಪಿಸಲಾಗಿದೆ.

8. **<u>ಸಾರ್ವಜನಿಕ ಬೀದಿ ದೀಪ</u> :-** 2013-14 ನೇ ಸಾಲಿನಲ್ಲಿ ಅವಳ ನಗರದ ಎಲ್ಲ ಪ್ರದೇಶಗಳಿಗೆ ಬೀದಿ ದೀಪ ಬೆಳಕಿನ ವ್ಯವಸ್ಥೆ ನಿರ್ವಹಿಸುವ ಸಲುವಾಗಿ **ರೂ. 370** ಲಕ್ಷಗಳ ರಾಜಸ್ವ ವೆಚ್ಚ ಹಾಗೂ ವಿವಿಧ ವರ್ತುಲಗಳಲ್ಲಿ ಬೆಳಕಿನ ವ್ಯವಸ್ಥೆಗಾಗಿ ಹೈಮಾಸ್ಟ ಹಾಗೂ ಹೊಸ ಬೀದಿ ದೀಪ ಸ್ಥಾವರಗಳನ್ನು ಅಳವಡಿಸಲು **ರೂ. 346.36** ಲಕ್ಷಗಳನ್ನು ಬಂಡವಾಳ ವೆಚ್ಚಕ್ಕಾಗಿ ಕಾಯ್ದಿರಿಸಲಾಗಿದೆ. ಕಡಿಮೆ ವಿದ್ಯುತ್ ಬಳಸಿ, ಹೆಚ್ಚು ಬೆಳಕನ್ನು ನೀಡುವ ಹೊಸ ಮಾದರಿಯ ವಿದ್ಯುತ್ ದೀಪಗಳನ್ನು ಅಳವಡಿಸಿ ಮಹಾನಗರ ಪಾಲಿಕೆಗೆ ವಿದ್ಯುತ್ ವೆಚ್ಚವನ್ನು ಕಡಿಮೆ ಮಾಡುವ ಯೋಜನೆಗಾಗಿ ಹೆಚ್ಚು ಪ್ರಾಶಸ್ತ್ಯ ನೀಡಲಾಗುವುದು.

೯. **<u>ಕಲೆ, ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು</u>** :- ಸರ್ವಧರ್ಮ ಸಮನ್ವಯ ತತ್ವದಲ್ಲಿ ಪಾಲಿಕೆಯು ನಗರದ ಎಲ್ಲಾ ಸಮುದಾಯಗಳನ್ನು ಗೌರವಿಸುತ್ತಾ ಬಂದಿದ್ದು ಮಾತ್ರವಲ್ಲದೆ ಕಲೆ, ಕ್ರೀಡೆ ಮತ್ತು ಸಾಂಸ್ಕೃತಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದು ನಮಗೆಲ್ಲಾ ಹೆಮ್ಮೆಯ ವಿಷಯವಾಗಿದೆ. ಆದುದರಿಂದ ಸರ್ವಧರ್ಮ ಕಾರ್ಯಕ್ರಮಗಳನ್ನು ಈ ವರ್ಷವೂ ಮುಂದುವರೆಸಲು ಪಾಲಿಕೆಯು ನಿರ್ಧರಿಸಿರುತ್ತದೆ. ಈ ದಿಶೆಯಲ್ಲಿ ಧಾರವಾಡ ಜಿಲ್ಲಾ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸುವ ಸಲುವಾಗಿ **ರೂ. 25** ಲಕ್ಷಗಳನ್ನು, ಸಭೆ ಸಮಾರಂಭಗಳಿಗೆ **ರೂ. 55** ಲಕ್ಷಗಳನ್ನು ಮತ್ತು ಮಹಾನಗರ ಪಾಲಿಕೆಯ ಸುವರ್ಣ ಮಹೋತ್ಸವ ಆಚರಿಸಲು (2013-14 ನೇ ಸಾಲಿಗೆ) **ರೂ. 25** ಲಕ್ಷಗಳನ್ನು ಮೀಸಲಿರಿಸಲಾಗಿದೆ.

೧೦. **<u>"ವಿದ್ಯಾಶ್ರೀ" ಪುರಸ್ಕಾರ</u>** :- ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುವ ನಾಗರೀಕರ ಪ್ರತಿಭಾವಂತ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ, ಮತ್ತು ಎರಡನೇ ಪಿಯುಸಿ, (ಆರ್ಟ್ಸ್, ವಾಣಿಜ್ಯ ಮತ್ತು ವಿಜ್ಞಾನ) ವಿಭಾಗಗಳಲ್ಲಿ ಕ್ರಮವಾಗಿ ಪ್ರಥಮ, ದ್ವಿತೀಯ, ಮತ್ತು ತೃತೀಯ "ವಿದ್ಯಾಶ್ರೀ" ಪುರಸ್ಕಾರ ನೀಡಲು ನಿರ್ಧರಿಸಲಾಗಿದೆ. ಪ್ರಥಮ ಪುರಸ್ಕಾರ (ಮಹಾಪೌರರ ಪುರಸ್ಕಾರ) **ರೂ. 25000/-**, ದ್ವಿತೀಯ ಪುರಸ್ಕಾರ (ಉಪಮಹಾಪೌರರ ಪುರಸ್ಕಾರ) **ರೂ.**

**15000/-,** ತೃತೀಯ ಪುರಸ್ಕಾರ (ಆಯುಕ್ತರ ಪುರಸ್ಕಾರ) **ರೂ. 10000/-** , ಗಳ ನಗದು ಪುರಸ್ಕಾರಗಳನ್ನು ನೀಡಲಾಗುವುದು. ಈ ಯೋಜನೆಯನ್ನು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರೋತ್ಸಾಹವನ್ನು ನೀಡುವ ಉದ್ದೇಶದಿಂದ ಮತ್ತು ಮಹಾನಗರ ಪಾಲಿಕೆಯು ಇಂತಹ ಅರ್ಹ ವಿದ್ಯಾರ್ಥಿಗಳನ್ನು ಗುರುತಿಸಿ ಗೌರವಿಸುವ ಉದ್ದೇಶದಿಂದ ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯು ಶಾಶ್ವತ ಯೋಜನೆಯಾಗಿ ಮುಂದುವರೆಯುವುದು. ಈ ಯೋಜನೆಗೆ ರೂ. 5 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

11. **ಸುವರ್ಣ ಬಸ್ ನಿಲ್ದಾಣ** :- ಮಹಾನಗರ ಪಾಲಿಕೆಯು ಸುವರ್ಣ ಮಹೋತ್ಸವವನ್ನು ಅವಳಿ ನಗರಗಳಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಆಚರಿಸುತ್ತಿದ್ದು, ಸದರ ಆಚರಣೆಯ ನೆನಪಿಗಾಗಿ ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ 100 ಬಸ್ ತಂಗುದಾಣಗಳನ್ನು **ರೂ. 200** ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ.

12. **"ಹಸಿರು- ಉಸಿರು ಯೋಜನೆ"** :- ಅವಳಿ ನಗರಗಳಲ್ಲಿ ವಾಯು ಮಾಲಿನ್ಯ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಅವಳಿ ನಗರದ ಸೌಂದರೀಕರಣಕ್ಕಾಗಿ ಹಾಗೂ ಈ ಹಿಂದೆ ಸಸ್ಯ ಶ್ಯಾಮಲೆಯಾಗಿದ್ದ ಅವಳಿನಗರಗಳಲ್ಲಿ ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ "ಹಸಿರು-ಉಸಿರು" ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ನಗರವನ್ನು

ಸುಂದರ ಮತ್ತು ಹಸಿರಾಗಿಸುವ ಯೋಜನೆಯಿದಾಗಿದೆ. ಈ ಯೋಜನೆಯ ಅಡಿಯಲ್ಲಿ ಅವಳಿನಗರದ ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸಿ ನಗರವನ್ನು ಹಸಿರೀಕರಿಸಲಾಗುವುದು. "ಹಸಿರು-ಉಸಿರು" ಯೋಜನೆಗಾಗಿ 2013-14 ನೇ ಸಾಲಿನ ಆಯ್ಯ-ವಯ್ಯದಲ್ಲಿ ಒಟ್ಟು **ರೂ. 343.18** ಲಕ್ಷಗಳನ್ನು ಒದಗಿಸಲಾಗಿದೆ. ಮಳೆ ನೀರು ಕೊಯ್ಲುಗಾಗಿ **ರೂ. 5** ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

13. **"ಆರೋಗ್ಯ ರಕ್ಷೆ" ಯೋಜನೆ** :- ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆಯಲ್ಲಿ ಸೇವೆ ಸಲ್ಲಿಸುತ್ತಿರುವ ಖಾಯಂ ಪೌರ ಕಾರ್ಮಿಕರ ಆರೋಗ್ಯ ಕಾಪಾಡುವ ಉದ್ದೇಶದಿಂದ "ಆರೋಗ್ಯ ರಕ್ಷೆ" ಯೋಜನೆ ಜಾರಿಯಲ್ಲಿರುತ್ತದೆ.

ಈ ಯೋಜನೆ ಅಡಿಯಲ್ಲಿ ಪೌರ ಕಾರ್ಮಿಕರು "ಆರೋಗ್ಯ ರಕ್ಷೆ" ಗುರುತು ಕಾರ್ಡಗಳನ್ನು ಪಡೆಯುತ್ತಿರುವರು ಮತ್ತು ಆಯ್ದ ಆಸ್ಪತ್ರೆಗಳಲ್ಲಿ ನೇರವಾಗಿ ದಾಖಲಾಗಿ ವೈದ್ಯಕೀಯ ಚಿಕಿತ್ಸೆಗಳನ್ನು ಪಡೆಯತ್ತಿರುವರು. ಸದರಿ ಯೋಜನೆಯು ಸರಕಾರಿ ನೌಕರರ ವೈದ್ಯಕೀಯ ಹಾಜರಾತಿ ನಿಯಮಗಳು-1963 ರ ಮಾರ್ಗ ಸೂಚಿಗಳ ಅಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಗೆ ಪ್ರಸಕ್ತ ಸಾಲಿನ ಆಯ-ವ್ಯಯದಲ್ಲಿ **ರೂ. 200** ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

14. **<u>ಪೌರ ಕಾರ್ಮಿಕರ ಮಕ್ಕಳಿಗೆ ಲ್ಯಾಪ್ ಟಾಪ್</u>** :- ಮಹಾನಗರ ಪಾಲಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಪೌರ ಕಾರ್ಮಿಕರ ಮಕ್ಕಳು ತಾಂತ್ರಿಕ (B.E) ವೈದ್ಯಕೀಯ (M.B.B.S), ಮತ್ತು ಪಿ.ಎಚ್.ಡಿ ವ್ಯಾಸಂಗ ಮಾಡುತ್ತಿದ್ದಲ್ಲಿ ಪಾಲಿಕೆಯಿಂದ ಉಚಿತವಾಗಿ "ಲ್ಯಾಪ್ ಟಾಪ್" ಗಳನ್ನು ವಿತರಿಸಿ ಪ್ರೋತ್ಸಾಹಿಸಲಾಗುವುದು. ಸದರಿ ಕಾರ್ಯಕ್ರಮಕ್ಕೆ **ರೂ. 10** ಲಕ್ಷಗಳನ್ನು ಮೀಸಲಿಡಲಾಗಿದೆ.

15. **<u>ಪಾಲಿಕೆಯ ನೌಕರರಿಗೆ ಮನೆ ನಿರ್ಮಿಸಲು ಸಾಲ</u>;** ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ನೌಕರರಿಗೆ ಸ್ವಂತ ಮನೆ ನಿರ್ಮಿಸಿಕೊಳ್ಳಲು ಗೃಹ ಸಾಲ ನೀಡಲಾಗುತ್ತಿದೆ ಪ್ರತಿ ಆರ್ಥಿಕ ವರ್ಷದಲ್ಲಿ 20 ಜನ ಖಾಯಂ ನೌಕರರಿಗೆ ಗೃಹ ಸಾಲ ನೀಡಲಾಗುತ್ತಿದೆ 2013-14 ನೇ ಸಾಲಿನ ಅಯ-ವ್ಯಯದಲ್ಲಿ ಈ ಕಾರ್ಯಕ್ರಮಕ್ಕೆ ರೂ. 120 ಲಕ್ಷಗಳನ್ನು ಮಿಸಲಿಡಲಾಗಿದೆ.

16. **<u>ಮಹಿಳಾ ಸುರಕ್ಷತೆ</u>** :- ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಮಹಿಳಾ ದೌರ್ಜನ್ಯಗಳನ್ನು ತಡೆಯುವ ನಿಟ್ಟಿನಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯು ಸಹ ಕಾರ್ಯಕ್ರಮಗಳನ್ನು ರೂಪಿಸಲು ಮುಂದಾಗಿದ್ದು, ಈ ಕಾರ್ಯಕ್ರಮಗಳನ್ನು ಜಾರಿಗೆ ತರುವ ಉದ್ದೇಶದಿಂದ **ರೂ. 25** ಲಕ್ಷಗಳನ್ನು 2013-14 ನೇ ಸಾಲಿನ ಆಯ-ವ್ಯಯದಲ್ಲಿ ಮೀಸಲಿಡಲಾಗಿದೆ. ಸದರಿ

ಕಾರ್ಯಕ್ರಮದ ಅಡಿಯಲ್ಲಿ ಮಹಿಳೆಯರಿಗೆ ಸ್ವಯಂ ರಕ್ಷಣೆಗಾಗಿ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

17. **ಆರೋಗ್ಯ ಮತ್ತು ವೈದ್ಯಕೀಯ ಸೇವೆ** :- ಆರೋಗ್ಯವು ಪ್ರತಿಯೊಬ್ಬ ನಾಗರೀಕರ "ಆಸ್ತಿ". ಅವಳಿ ನಗರದ ನಾಗರೀಕರ ಆರೋಗ್ಯ ಮತ್ತು ಸ್ವಾಸ್ಥ್ಯ ಕಾಪಾಡುವ ನಿಟ್ಟಿನಲ್ಲಿ 12 ಆಸ್ಪತ್ರೆಗಳು ಕಾರ್ಯ ನಿರ್ವಹಿಸುತ್ತಿದ್ದು, ಜನತೆಯ ಸ್ವಾಸ್ಥ್ಯ ಕಾಪಾಡುವ ಕಾರ್ಯಕ್ರಮಕ್ಕಾಗಿ **ರೂ. 725.95** ಲಕ್ಷಗಳನ್ನು ವ್ಯಯಿಸಲು ನಿರ್ಧರಿಸಲಾಗಿದೆ. ಪಾಲಿಕೆಯ ಸದಸ್ಯರಿಗೆ ವೈದ್ಯಕೀಯ ವೆಚ್ಚ ಭರಿಸಲು 2013-14 ನೇ ಸಾಲಿನಲ್ಲಿಯೂ **ರೂ. 20** ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

18. **ಕ್ರೀಡಾ ಚಟುವಟಿಕೆ ಕಾರ್ಯಕ್ರಮ** :- ಯುವ ಜನರಲ್ಲಿ ಹಾಗೂ ಮಕ್ಕಳಲ್ಲಿ ಕ್ರೀಡಾ ಮನೋಭಾವ ಹೆಚ್ಚಿಸುವ ನಿಟ್ಟಿನಲ್ಲಿ ಕ್ರೀಡೆಗಾಗಿ **ರೂ. 46** ಲಕ್ಷಗಳನ್ನು ಮೀಸಲಿಡಲಾಗಿದೆ. ಮೀಸಲಿಡಲಾದ 46 ಲಕ್ಷಗಳಲ್ಲಿ **ರೂ. 20** ಲಕ್ಷಗಳ ವೆಚ್ಚದಲ್ಲಿ ಮಹಾನಗರ ಪಾಲಿಕೆಗೆ ಸೇರಿದ ಧಾರವಾಡ ಈಜುಗೊಳದ ಹತ್ತಿರ ಬಾಸ್ಕೇಟ್ ಬಾಲ್ ಕೋರ್ಟ ನವೀಕರಣಕ್ಕಾಗಿ **ರೂ. 20** ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

19. **"ಸುವರ್ಣಶ್ರೀ" ವಿಮಾ ಯೋಜನೆ** :- "ಸುವರ್ಣಶ್ರೀ" ವಿಮಾ ಯೋಜನೆಯು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ

ಬಹುಮುಖ್ಯ ಯೋಜನೆಯಾಗಿ ರೂಪಗೊಳ್ಳಲಿದ್ದು, ಸದರಿ ಯೋಜನೆ ಅಡಿಯಲ್ಲಿ ಸರಕಾರದ ಸಹ ಭಾಗಿತ್ವ ನಿರೀಕ್ಷಿಸಿ ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುವುದು. ಈ ಯೋಜನೆ ಅಡಿಯಲ್ಲಿ ಯೋಜನೆಯ ಫಲಾನುಭವಿಗಳು ಆರೋಗ್ಯ ಮತ್ತು ಅಪಘಾತ ವಿಮೆಗಳ ಪ್ರಯೊಜನಗಳನ್ನು ಪಡೆಯುವರು. ಈ ಯೋಜನೆ ಕುರಿತು ಸಮರ್ಪಕ ಹಾಗೂ ಅವಶ್ಯಕ ರೂಪರೇಷಗಳನ್ನು ತಯಾರಿಸಿ ಪ್ರಥಮ ಹಂತದಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕಡು ಬಡವರು ಹಾಗೂ ಪೌರ ಕಾರ್ಮಿಕರಿಗೆ ವಿಮಾ ಯೋಜನೆಯನ್ನು ಅಳವಡಿಸಿಕೊಳ್ಳಲಾಗುವುದು. 2013-14 ನೇ ಸಾಲಿನ ಆಯ-ವ್ಯಯದಲ್ಲಿ ರೂ. 200 ಲಕ್ಷಗಳನ್ನು ಈ ಯೋಜನೆಯಡಿ ಕಾಯ್ದಿರಿಸಲಾಗಿದೆ.

20. **ಕೊಳಚೆ ಪ್ರದೇಶದಲ್ಲಿ ನಾಲಾ ನಿರ್ಮಾಣ ಮತ್ತು ಕೆರೆಗಳ ಅಭಿವೃದ್ಧಿ** :- ಕೊಳಚೆ ಪ್ರದೇಶಗಳಲ್ಲಿ ನಾಲಾ ನಿರ್ಮಾಣ ತುರ್ತು ಕಾಮಗಾರಿಗಾಗಿ **ರೂ. 50** ಲಕ್ಷಗಳನ್ನು ಬಂಡವಾಳ ಖಾತೆಯಲ್ಲಿ ಕಾಯ್ದಿರಿಸಲಾಗಿದೆ. ಕೆರೆಗಳ ಅಭಿವೃದ್ಧಿಗಾಗಿ **ರೂ. 50** ಲಕ್ಷಗಳನ್ನು ರಾಜಸ್ವ ಖಾತೆಯಲ್ಲಿ ಕಾಯ್ದಿರಿಸಲಾಗಿದೆ. ನಾಲಾ ನಿರ್ಮಾಣ ಕಾಮಗಾರಿಗಳು ಮತ್ತು ಕೆರೆಗಳ ಅಭಿವೃದ್ಧಿಗೆ ಹೆಚ್ಚು ಬಂಡವಾಳ ಅವಶ್ಯವಿರುವುದರಿಂದ ಈ ಕಾಮಗಾರಿಗಳನ್ನು 100 ಕೋಟಿ ಅನುದಾನ ಕಾಮಗಾರಿಗಳಾಗಿ ಅನುಷ್ಠಾನಗೊಳಿಸಲಾಗುವುದು.

21. **<u>ಪಾಲಿಕೆಯಲ್ಲಿ ವಿಲೀನಗೊಂಡ ಹಳ್ಳಿಗಳ ಅಭಿವೃದ್ಧಿ</u>** :- ಬೇರೆ ಬೇರೆ ಹಂತಗಳಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿ ವಿಲೀನಗೊಂಡ ಹಳ್ಳಿಗಳ ಅಭಿವೃದ್ಧಿ ಆಗಬೇಕಾಗಿರುತ್ತದೆ. ಅಭಿವೃದ್ಧಿ ಕಾಮಗಾರಿಗಳಾದ ಬೀದಿ-ದೀಪ, ರಸ್ತೆ, ಒಳಚರಂಡಿ, ತೆರೆದ ಚರಂಡಿ ಮತ್ತು ಕುಡಿಯುವ ನೀರು ಮುಂತಾದವುಗಳನ್ನು ಒದಗಿಸಬೇಕಾಗುತ್ತದೆ. ವಿಲೀನಗೊಂಡ ಹಳ್ಳಿಗಳ ಅಭಿವೃದ್ಧಿಯನ್ನು ಹಂತ ಹಂತವಾಗಿ ಕೈಗೊಳ್ಳಲು **ರೂ.** **100** ಲಕ್ಷಗಳನ್ನು ಆಯ-ವ್ಯಯದಲ್ಲಿ ಒದಗಿಸಲಾಗಿದೆ.

22. **<u>ಮಾರುಕಟ್ಟೆಗಳ ಅಭಿವೃದ್ಧಿ</u>:-** ಅವಳಿನಗರದ ವಾಣಿಜ್ಯ ಸಂಕೀರ್ಣಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾರುಕಟ್ಟೆಗಳ ಮಳಿಗೆಗಳಲ್ಲಿ ಮೂಲಭೂತ ಸೌಕರ್ಯಗಳಾದ ನೀರು ಮತ್ತು ಶೌಚಾಲಯಗಳನ್ನು ಒದಗಿಸಲು **ರೂ.** **150** ಲಕ್ಷಗಳನ್ನು 2013-14 ನೇ ಸಾಲಿನಲ್ಲಿ ಕಾಯ್ದಿರಿಸಲಾಗಿದೆ.

23. **<u>ಆಸ್ಪತ್ರೆಗಳ ನವೀಕರಣ</u>** :- ಅವಳಿನಗರದ ನಾಗರೀಕರ, ಅದರಲ್ಲೂ ಬಡವರು, ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರಿಗೆ ಉತ್ತಮವಾದ ವೈದ್ಯಕೀಯ ಸೇವೆಯನ್ನು ಒದಗಿಸಲು **ರೂ.** **108** ಲಕ್ಷಗಳನ್ನು ಪಾಲಿಕೆಯ ಆಸ್ಪತ್ರೆಗಳನ್ನು ನವೀಕರಿಸಲು ಕಾಯ್ದಿರಿಸಲಾಗಿದೆ. ಮಾತ್ರವಲ್ಲದೆ ಆಸ್ಪತ್ರೆಯ ರೋಗಿಗಳ ಸೇವೆಗಾಗಿ 2012-13 ನೇ ಸಾಲಿನಲ್ಲಿ ಒಂದು ಮತ್ತು 2013-14 ನೇ ಸಾಲಿನಲ್ಲಿ

ಇನ್ನೊಂದು ಎಂಬ್ಯುಲೇನ್ಸ್ ಖರೀದಿಸಲು ಒಟ್ಟು ರೂ 30 ಲಕ್ಷಗಳ ಅವಕಾಶವನ್ನು ಕಲ್ಪಿಸಲಾಗಿದ್ದು, ಇದರಲ್ಲಿ ಒಂದನ್ನು ಖಾಸಗಿ ಸಂಸ್ಥೆಯ ಸಹಭಾಗಿತ್ವದಲ್ಲಿ ನಿರ್ವಹಿಸಲಾಗುವುದು.

24. **"ಸಹಭಾಗಿತ್ವ" ಯೋಜನೆ** :- ಪಾಲಿಕೆಯ ಅಭಿವೃದ್ಧಿಯಲ್ಲಿ ಜನರ ಸಹಭಾಗಿತ್ವ ಹೆಚ್ಚಿಸುವ ಉದ್ದೇಶದಿಂದ ಮತ್ತು ಪ್ರತಿ ವಾರ್ಡ್‌ಗಳಲ್ಲಿ ನಾಗರೀಕರು ಪಾಲಿಕೆಯ ಕಾರ್ಯಕ್ರಮಗಳ ಅನುಷ್ಠಾನಗಳಲ್ಲಿ ಭಾಗವಹಿಸುವಂತೆ ಮಾಡುವುದು ಮುಖ್ಯವಾಗಿರುತ್ತದೆ. ಮಾತ್ರವಲ್ಲದೆ ಜನತಂತ್ರ ವ್ಯವಸ್ಥೆಯಲ್ಲಿ ನಾಗರೀಕರು ಪ್ರಮುಖ ಪಾತ್ರವನ್ನು ವಹಿಸುವವರಾಗಿದ್ದು, ನಾಗರೀಕರಿಂದ ನೇರವಾಗಿ ಸಲಹೆ ಸೂಚನೆಗಳನ್ನು ಪಡೆಯುವುದು ಅವಶ್ಯವಾಗಿರುತ್ತದೆ. ಆದುದರಿಂದ ಮುಂದಿನ ದಿನಗಳಲ್ಲಿ "ವಾರ್ಡ್ ಸಮಿತಿ"ಗಳನ್ನು ರಚಿಸಲು ಉದ್ದೇಶಿಸಲಾಗಿದ್ದು, ಸದರಿ ಯೋಜನೆ ಅನುಷ್ಠಾನಗೊಳಿಸಲು 2013-14 ನೇ ಸಾಲಿನಲ್ಲಿ ರೂ. 25 ಲಕ್ಷಗಳನ್ನು ಒದಗಿಸಲಾಗಿದೆ.

25. **ನಾಗರೀಕರ ಸುರಕ್ಷತೆಗೆ "ಸಿಸಿ ಕ್ಯಾಮರಾ"** :- ಅವಳಿ ನಗರದ ಮುಖ್ಯ ಟ್ರಾಫಿಕ್ ಸಿಗ್ನಲ್‌ಗಳನ್ನು ಮತ್ತು ಹೆಚ್ಚು ಜನಸಂಚಾರ ಇರುವ ಪ್ರದೇಶಗಳನ್ನು ಗುರುತಿಸಿ ಪ್ರಥಮ ಹಂತದಲ್ಲಿ ಸಿಸಿ ಕ್ಯಾಮರಾಗಳನ್ನು ಟ್ರಾಫಿಕ್ ಪೋಲಿಸ್ ಸಹಭಾಗಿತ್ವದೊಂದಿಗೆ ಅಳವಡಿಸಲು ನಿರ್ಧರಿಸಲಾಗಿದೆ.

ಅವಳಿ ನಗರದ ಜನತೆಯ ಭದ್ರತೆಯ ದೃಷ್ಟಿಯಿಂದ ಈ ಕ್ರಮ ಜರುಗಿಸಲಾಗುತ್ತದೆ. 2013-14 ನೇ ಸಾಲಿನ ಆಯ-ವ್ಯಯದಲ್ಲಿ **ರೂ. 16** ಲಕ್ಷಗಳನ್ನು ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಉಪಯೋಗಿಸಿಕೊಳ್ಳಲಾಗುವುದು.

26. **<u>ನೈರ್ಮಲ್ಯ ಮತ್ತು ಘನ ತ್ಯಾಜ್ಯ ವಸ್ತು ನಿರ್ವಹಣೆ</u>** :- ಅವಳಿ ನಗರದ ನೈರ್ಮಲ್ಯ, ಘನ ತ್ಯಾಜ್ಯ ವಸ್ತು ನಿರ್ವಹಣೆ ಕಾರ್ಯಕ್ರಮ ಅಡಿಯಲ್ಲಿ ಅವಳಿನಗರದ ಸ್ವಚ್ಚತೆ ಮತ್ತು ಆರೋಗ್ಯ ಕಾಪಾಡುವ ದೃಷ್ಟಿಯಿಂದ ಅತ್ಯಂತ ವ್ಯವಸ್ಥಿತವಾಗಿ ವಲಯ ಮಟ್ಟಗಳಲ್ಲಿ ವಾರ್ಡಗಳನ್ನು ಸ್ವಚ್ಚಗೊಳಿಸಿ ಶುಭ್ರವಾಗಿಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಘನ ತ್ಯಾಜ್ಯ ವಿಲೇವಾರಿ ನಿರ್ವಹಣೆಗಾಗಿ **ರೂ. 2109.50** ಲಕ್ಷಗಳನ್ನು ಮತ್ತು ಬಂಡವಾಳ ವೆಚ್ಚದ ಅಡಿಯಲ್ಲಿ **ರೂ. 471.40** ಲಕ್ಷ ಹೀಗೆ ಒಟ್ಟು **ರೂ. 2580.90** ಲಕ್ಷಗಳನ್ನು 2013-14 ನೇ ಸಾಲಿನ ಆಯ- ವ್ಯಯದಲ್ಲಿ ಕಾಯ್ದಿರಿಸಲಾಗಿದೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರತಿ ದಿನ 400 ಟನ್ ತ್ಯಾಜ್ಯ ಉತ್ಪಾದನೆ ಆಗುತ್ತಿದೆ. ಮನೆ ಮನೆ ಕಸ ಸಂಗ್ರಹಣೆಯನ್ನು 70% ರಷ್ಟು ನಿರ್ವಹಿಸಲಾಗುತ್ತಿದೆ. ನಗರದ ಪ್ರಮುಖ ರಸ್ತೆಗಳನ್ನು ವೈಜ್ಞಾನಿಕವಾಗಿ ಸ್ವಚ್ಛಗೊಳಿಸುವ ಉದ್ದೇಶದಿಂದ ಎರಡು ಕಸ ಗುಡಿಸುವ ಯಂತ್ರಗಳನ್ನು ಖರೀದಿಸಲಾಗಿದೆ. ವಾರ್ಡ ನಂ. 24 ರಲ್ಲಿ ತ್ಯಾಜ್ಯ ವಸ್ತುಗಳನ್ನು

ವೈಜ್ಞಾನಿಕವಾಗಿ ಸಂಸ್ಕರಣೆ ಹಾಗೂ ವಿಲೇವಾರಿ ಮಾಡುವ ಉದ್ದೇಶದಿಂದ "ಶೂನ್ಯ ಕಸ ನಿರ್ವಹಣೆ" ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಮಹಾನಗರ ಪಾಲಿಕೆಯ ಉಳಿದ ಎಲ್ಲಾ ವಾರ್ಡಗಳಲ್ಲಿಯೂ "ಶೂನ್ಯ ಕಸ ನಿರ್ವಹಣೆ" ಕೇಂದ್ರಗಳನ್ನು ಹಂತ ಹಂತವಾಗಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ಮಹಾನಗರ ಪಾಲಿಕೆಯ ಒಳ ಚರಂಡಿ ಸ್ವಚ್ಛತೆಗಾಗಿ 4 ಜೆಟ್ಟಿಂಗ್ ಕಂ ಸಕ್ಷೆನ್ ( jetting and suction ) ಯಂತ್ರಗಳನ್ನು ಖರೀದಿಸಲಾಗಿದೆ. ಇನ್ನೂ 5 ಜೆಟ್ಟಿಂಗ್ ಕಂ ಸಕ್ಷೆನ್ ಯಂತ್ರಗಳನ್ನು ಖರೀದಿಸಲಾಗುವುದು. 2 ಒಳ ಚರಂಡಿ ಹೂಳೆತ್ತುವ ಯಂತ್ರಗಳನ್ನೂ ಖರೀದಿಸಲಾಗುವುದು.

27. **ವೈಜ್ಞಾನಿಕ ಘನ ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆ: –** ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಗಂಭೀರ ಸಮಸ್ಯೆಯಾದ ಘನತ್ಯಾಜ್ಯ ನಿರ್ವಹಣೆಗಾಗಿ ವೈಜ್ಞಾನಿಕ ಸಂಸ್ಕರಣೆ ಹಾಗೂ ವಿಲೇವಾರಿ ಘಟಕವನ್ನು Design Finance Build Operate and Transfer (DFBOT) ಆಧಾರದ ಮೇಲೆ ಸ್ಥಾಪಿಸಲು ಸರಕಾರವು ತನ್ನ ಆದೇಶ ದಿನಾಂಕ : 05-10-2012 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ. ಈ ಘಟಕವು **ರೂ. 5033** ಲಕ್ಷಗಳ ಬಂಡವಾಳ ವೆಚ್ಚದಲ್ಲಿ ಸ್ಥಾಪನೆಯಾಗಲಿದೆ. ಈ ಯೋಜನೆಯು ಮಹಾನಗರ ಪಾಲಿಕೆಯ ಬಹುಮುಖ್ಯ ಯೋಜನೆಯಾಗಿದ್ದು, ನಾಗರೀಕರ ಆರೋಗ್ಯ ಮತ್ತು ನಗರದ ಸ್ವಚ್ಛತೆ

ಕಾಪಾಡುವಲ್ಲಿ ಮಹತ್ವದ ಪಾತ್ರವಹಿಸುವುದರಲ್ಲಿ ಸಂಶಯವಿಲ್ಲ. ಕರ್ನಾಟಕ ಸರಕಾರದ ಮಾನ್ಯ ಮುಖ್ಯಮಂತ್ರಿ ಶ್ರೀ ಜಗದೀಶ ಶೆಟ್ಟರ್ ತಮ್ಮ ಆಯ-ವ್ಯಯದಲ್ಲಿ **ರೂ.** **10000** ಲಕ್ಷಗಳನ್ನು ಹಂಚಿಕೆ ಮಾಡಿದ್ದು (**ರೂ.** **100** ಕೋಟಿ) ನಮಗೆಲ್ಲರಿಗೂ ಹೆಮ್ಮೆಯ ವಿಷಯ ಮತ್ತು ಈ ದಿಶೆಯಲ್ಲಿ ಮಹಾನಗರ ಪಾಲಿಕೆಯು ಕಾರ್ಯಕ್ರಮ ರೂಪಿಸುವುದು.

೨೮. **<u>ರಾಜ್ಯ ಸರಕಾರದ 100 ಕೋಟಿ ಅನುದಾನ</u>** :- ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಇತಿಹಾಸದಲ್ಲಿಯೇ ಪ್ರಪ್ರಥಮವಾಗಿ ಕರ್ನಾಟಕ ಸರಕಾರ ಒಟ್ಟು **ರೂ.** **200** ಕೋಟಿ ಅನುದಾನದಲ್ಲಿ ಅಭಿವೃದ್ಧಿ ಕೆಲಸಗಳನ್ನು ಕೈಗೊಂಡಿರುವುದು ದಾಖಲೆಯ ಮತ್ತು ಸಂತಸದ ವಿಷಯವಾಗಿದೆ. ಅವಳಿ ನಗರದ ಸರ್ವತೋಮುಖ ಅಭಿವೃದ್ಧಿಗಾಗಿ ಮಂಜೂರಾದ ಕ್ರೀಯಾ ಯೋಜನೆಗಳಂತೆ ಪ್ರಥಮ ಹಂತದ **ರೂ.** **100** ಕೋಟಿಗಳನ್ನು ವೆಚ್ಚ ಭರಿಸಲಾಗಿದ್ದು, ಎರಡನೇ ಹಂತದ ಕಾಮಗಾರಿಗಳು ತ್ವರಿತಗತಿಯಲ್ಲಿ ಪ್ರಗತಿಯಲ್ಲಿರುತ್ತವೆ. ಅವಳಿ ನಗರಗಳ ರಸ್ತೆಗಳ ಡಾಂಬರೀಕರಣ, ಉದ್ಯಾನವನಗಳ ಅಭಿವೃದ್ಧಿ, ಸ್ಮಶಾನಗಳ ಅಭಿವೃದ್ಧಿ, ಕೆರೆಗಳ ಅಭಿವೃದ್ಧಿ ಹಾಗೂ ಫುಟ್‌ಪಾತ ನಿರ್ಮಾಣ ಇತ್ಯಾದಿ ಕಾಮಗಾರಿಗಳನ್ನು ತೆಗೆದುಕೊಳ್ಳುವ ಮೂಲಕ ಅವಳಿ ನಗರವನ್ನು ಸುಂದರ ಹಾಗೂ ಸದೃಢ

ನಗರವನ್ನು ಮಾಡಲು ಕಂಕಣ ಬದ್ಧರಾಗಿದ್ದೇವೆ ಎಂಬುದನ್ನು ತಿಳಿಸಲು ಸಂತೋಷವಾಗುತ್ತದೆ.

29. **ಹುಬ್ಬಳ್ಳಿಯ ನವನಗರದಲ್ಲಿ ಕ್ರೀಡಾಂಗಣ ಹಾಗೂ ಪೇವಿಲಿಯನ್ ಬ್ಲಾಕ್ ನಿರ್ಮಾಣ :-** ಹುಬ್ಬಳ್ಳಿಯ ನವನಗರದಲ್ಲಿ ಕ್ರೀಡಾಂಗಣ ಹಾಗೂ ಪೇವಿಲಿಯನ್ ಬ್ಲಾಕ್ ನಿರ್ಮಾಣ ಕಾಮಗಾರಿಗೆ **ರೂ. 137.50** ಲಕ್ಷಗಳ ಅಂದಾಜು ಪಟ್ಟಿಗೆ ಸರಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ಆದೇಶಿಸಿದೆ. **ರೂ. 137.50** ಲಕ್ಷಗಳ ಪೈಕಿ ಶೇಕಡಾ 50 ರಷ್ಟು ಅಂದರೆ **ರೂ. 68.75** ಲಕ್ಷಗಳನ್ನು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಮತ್ತು ಉಳಿದ ಶೇಕಡಾ 50 ರಷ್ಟನ್ನು (**ರೂ 68.75 ಲಕ್ಷ**) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಅನುದಾನದಿಂದ ಭರಿಸಲು ಸರಕಾರವು ಆದೇಶಿಸಿರುತ್ತದೆ. ಈ ಯೋಜನೆಯನ್ನು ಜಿಲ್ಲಾ ಕ್ರೀಡಾಂಗಣ ಸಮಿತಿಯಿಂದ ಅನುಷ್ಠಾನಗೊಳಿಸಲು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯು ಅನುದಾನವನ್ನು ಬಿಡುಗಡೆಗೊಳಿಸುವುದು.

30. **ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮೂಲ ಭೂತ ಸೌಕರ್ಯಗಳ ಯೋಜನೆ :-** ಸದರಿ ಯೋಜನೆಯಡಿಯಲ್ಲಿ 8 ಪ್ರಾತ್ಯಕ್ಷಿಕೆ ವಾರ್ಡಗಳಲ್ಲಿ ಸುಮಾರು **ರೂ. 27.55** ಕೋಟಿ ವೆಚ್ಚದಲ್ಲಿ 24X7 ನೀರು ಪೂರೈಕೆ ವ್ಯವಸ್ಥೆ ಜಾರಿಗೊಳಿಸಿರುವುದು ತಮಗೆಲ್ಲರಿಗೂ ತಿಳಿದಿರುವ

ವಿಷಯವಾಗಿದೆ. ಸದರಿ ಯೋಜನೆಯು ರಾಷ್ಟ್ರ ಮಟ್ಟದಲ್ಲಿ ಪ್ರಶಂಸೆಗೆ ಪಾತ್ರವಾಗಿದ್ದು ನಮಗೆಲ್ಲರಿಗೂ ಹೆಮ್ಮೆಯ ಸಂಗತಿಯಾಗಿದೆ. ಪ್ರಸ್ತುತ ರಾಜ್ಯ ಸರಕಾರವು **ರೂ. 112.5** ಕೋಟಿ ರೂಪಾಯಿಗಳನ್ನು ಬಿಡುಗಡೆಗೊಳಿಸಿ 34 ವಾರ್ಡಗಳ ವ್ಯಾಪ್ತಿಯಲ್ಲಿ 24X7 ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲು ಟೆಂಡರ್ ಕರೆಯಲಾಗಿರುತ್ತದೆ. ಈಗಾಗಲೇ ಕರ್ನಾಟಕ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ಧಾರವಾಡ ಇವರಿಗೆ ಯೋಜನೆ ಅನುಷ್ಠಾನಕ್ಕಾಗಿ ಅನುದಾನ ಬಿಡುಗಡೆಗೊಳಿಸಲಾಗಿರುತ್ತದೆ, ಬಾಕಿ ಉಳಿದ 25 ವಾರ್ಡಗಳಲ್ಲಿ ಸದರಿ ಯೋಜನೆಯನ್ನು ವಿಸ್ತರಿಸಲು **ರೂ. 850** ಕೋಟಿ ಅಂದಾಜು ಮೊತ್ತದ ವಿವರವಾದ ಯೋಜನೆಯನ್ನು ಸರಕಾರಕ್ಕೆ ಸಲ್ಲಿಸಲಾಗಿದೆ. ಕರ್ನಾಟಕ ಸರಕಾರವು 2013-14 ನೇ ಸಾಲಿನ ಮುಂಗಡ ಪತ್ರದಲ್ಲಿ ಹುಬ್ಬಳ್ಳಿ-ಧಾರವಾಡದ ಎಲ್ಲಾ ವಾರ್ಡಗಳಲ್ಲಿ 24X7 ನೀರು ಸರಬರಾಜು ಯೋಜನೆಗೆ ಹಣಕಾಸು ನೆರವು ಭದ್ರತೆಯನ್ನು ಘೋಷಿಸಿರುವುದು ನಮಗೆಲ್ಲರಿಗೂ ಸಂತೋಷದ ವಿಷಯವಾಗಿದೆ.

31. **<u>ಎನ್.ಕೆ.ಎಸ್.ಯು.ಎಸ್.ಐ.ಪಿ,(NKSUSIP)</u>** :- ಉತ್ತರ ಕರ್ನಾಟಕ ನಗರ ಒಳಚರಂಡಿ ಮೂಲಭೂತ ಸೌಲಭ್ಯ ಅಭಿವೃದ್ಧಿ ಯೋಜನೆಯು ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಲ್ಲಿ ಒಳಚರಂಡಿ ಜಾಲಗಳನ್ನು ವಿಸ್ತರಿಸಿ ಮೇಲ್ದರ್ಜೆಗೆ ಏರಿಸಿ ಅವಳಿ ನಗರದ ನಾಗರೀಕರ ಆರೋಗ್ಯ ಮತ್ತು ಸುಚಿತ್ವ

ಕಾಪಾಡುವ ಉದ್ದೇಶ ಹೊಂದಿರುತ್ತದೆ. ಈ ಯೋಜನೆಯ ಅಡಿಯಲ್ಲಿ 150 ಎಂ.ಎಂ ವ್ಯಾಸದಿಂದ 2000 ಎಂ.ಎಂ ವ್ಯಾಸದವರೆಗಿನ ವಿವಿಧ ಅಳತೆಯ ಮುಖ್ಯ ಹಾಗೂ ಇತರ ಕೊಳವೆ ಮಾರ್ಗ ನಿರ್ಮಿಸಲಾಗುವುದು. ಮಾತ್ರವಲ್ಲದೇ ಹುಬ್ಬಳ್ಳಿಯಲ್ಲಿ 40 ಎಮ್.ಎಲ್.ಡಿ. (M.L.D) ಧಾರವಾಡದಲ್ಲಿ 20 M.L.D ಸಾಮರ್ಥ್ಯದ ಘನತ್ಯಾಜ್ಯ ಸಂಸ್ಕರಣ ಘಟಕಗಳನ್ನು (STP) ನಿರ್ಮಿಸಲಾಗುತ್ತಿದೆ. ಸದರಿ ಯೋಜನೆಗೆ **ರೂ.164** ಕೋಟಿ ವೆಚ್ಚ ಮಾಡಲಾಗುತ್ತಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

೩೨. **ಧಾರವಾಡ ಸೂಪರ್ ಮಾರ್ಕೆಟ್ :**- ಮಹಾನಗರ ಪಾಲಿಕೆ ವತಿಯಿಂದ ಧಾರವಾಡದ ಸುಭಾಸ ರಸ್ತೆಯ ಹತ್ತಿರ **5.5** ಎಕರೆ ಜಾಗ ಲಭ್ಯವಿದ್ದು ಸದರಿ ಜಾಗದ 3.25 ಎಕರೆ ಜಾಗವನ್ನು ಬಳಸಿ ಸಾರ್ವಜನಿಕರ ಬಹು ನಿರೀಕ್ಷಿತ ಬೇಡಿಕೆಯಂತೆ ಬಹು ಮಹಡಿ ಮಳಿಗೆಗಳ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಸರ್ಕಾರದಿಂದ ಆದೇಶವಾಗಿದ್ದು, ಸರಕಾರದ ಆದೇಶ ಸಂಖ್ಯೆ: ನಅಇ 108 ಎಹೆಚ್‌ಡಿ 2011, ಬೆಂಗಳೂರು ದಿನಾಂಕ: 02.11.2012 ಅದರಂತೆ ಈಗಾಗಲೇ ಟೆಂಡರ್ ಕರೆಯಲಾಗಿದೆ, ಸದರಿ ಬಹು ಮಹಡಿ ವಾಣಿಜ್ಯ ಸಂಕೀರ್ಣದ ಯೋಜನಾ ವೆಚ್ಚ **ರೂ. 120** ಕೋಟಿಗಳಾಗಿದ್ದು, ಸರಕಾರದ ಆದೇಶದಂತೆ ಖಾಸಗಿ ಸಹ ಭಾಗಿತ್ವದಲ್ಲಿ ಕೈಗೊಳ್ಳಲು ನಿರ್ಧರಿಸಲಾಗಿದೆ.

೩೩. **<u>ಹುಬ್ಬಳ್ಳಿ-ಧಾರವಾಡ ತ್ವರಿತ ಬಸ್ ಸಂಚಾರ ವ್ಯವಸ್ಥೆ</u> :- (ಬಿಆರ್‌ಟಿಎಸ್)**

ಅವಳಿನಗರದ ನಡುವೆ ತ್ವರಿತ ಬಸ್ ಸಂಚಾರದ ವ್ಯವಸ್ಥೆ (ಬಿಆರ್‌ಟಿಎಸ್) ಯೋಜನೆ ಅಡಿಯಲ್ಲಿ ನಗರದಲ್ಲಿ ೩೫ ಮೀಟರ್ ಹಾಗೂ ಹೊರ ವಲಯದಲ್ಲಿ 44 ಮೀಟರ್‌ಗೆ ಅಗಲದ ರಸ್ತೆ ನಿರ್ಮಿಸಲಾಗುತ್ತದೆ. ಸದರಿ ಯೋಜನೆಯು 2015 ರ ಜನವರಿ ವೇಳೆಗೆ ಬಸ್ ಸಂಚಾರ ಆರಂಭಿಸುವ ಗುರಿ ಹೊಂದಿದೆ. ಅವಳಿ ನಗರದ ನಡುವೆ 22 ಕಿ ಮೀ ಉದ್ದದ ಚತುಷ್ಪಥ-ಕಾರಿಡಾರ್ ರಸ್ತೆ ನಿರ್ಮಿಸಲಾಗುತ್ತಿದೆ. ರಾಜ್ಯದಲ್ಲೇ ಮೊದಲ ಬಾರಿಗೆ ಯೋಜನೆ ಅನುಷ್ಠಾನಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. **ರೂ. 682** ಕೋಟಿ ವೆಚ್ಚದ ಯೋಜನೆಯಲ್ಲಿ ಸಾರ್ವಜನಿಕರಿಗೆ ವಿಶ್ವದರ್ಜೆಯ ಸೌಲಭ್ಯ ಕಲ್ಪಿಸಲಾಗುವುದು. ಹುಬ್ಬಳ್ಳಿ-ಧಾರವಾಡ ಅವಳಿ ನಗರದಲ್ಲಿ ಸಂಚಾರ ಧಟ್ಟನೆ ಸಮಸ್ಯೆ ಸೃಷ್ಟಿಯಾಗಬಾರದು ಮತ್ತು ತ್ವರಿತ ಸಂಚಾರ ವ್ಯವಸ್ಥೆ ಗುರಿಯನ್ನು ಈ ಯೋಜನೆಯಿಂದ ಹೊಂದಲಾಗಿದೆ ಮತ್ತು ಈ ಮೂಲಕ ಸಾಮಾನ್ಯ ಪ್ರಯಾಣಿಕರ ಅನುಕೂಲವನ್ನು ಗುರಿಯಾಗಿಸಲಾಗಿದೆ.

೩4. **<u>ಆಧುನಿಕ ಬಸ್ ನಿಲ್ದಾಣಗಳು</u> :-** ನಗರ ಸಾರಿಗೆ ನಿರ್ದೇಶನಾಲಯ ಬೆಂಗಳೂರು ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗಳ ಸಹ ಭಾಗಿತ್ವದಲ್ಲಿ 20 ಆಧುನಿಕ ಬಸ್ ನಿಲ್ದಾಣಗಳನ್ನು ಹುಬ್ಬಳ್ಳಿಯ ಗೋಕುಲ ರಸ್ತೆಯಲ್ಲಿ ಸ್ಥಾಪಿಸಲು **ರೂ. 100** ಲಕ್ಷಗಳ ಅಂದಾಜು ಪತ್ರಿಕೆ ಸಲ್ಲಿಸಲಾಗಿದ್ದು

ಈ ಯೋಜನೆಗೆ ಸರಕಾರದಿಂದ ಮೊದಲ ಹಂತದಲ್ಲಿ **ರೂ. 20** ಲಕ್ಷ ಬಿಡುಗಡೆಯಾಗಿರುತ್ತದೆ. ಸದರಿ ತಂಗುದಾಣಗಳ ನಿರ್ಮಾಣಕ್ಕಾಗಿ ಈಗಾಗಲೇ ಟೆಂಡರ್ ಕರೆಯಲಾಗಿದೆ. ಇದರೊಂದಿಗೆ ಅವಳಿ ನಗರದ ಉಳಿದ ಬಡಾವಣೆಗಳಲ್ಲಿ ಸುಂದರ ಬಸ್ ತಂಗುದಾಣಗಳನ್ನು ಈ ಸುವರ್ಣ ವರ್ಷದಲ್ಲಿ ನಿರ್ಮಿಸಲಾಗುವುದು.

35. **ನಗರ ಬಡತನ ನಿರ್ಮೂಲನೆ ಮತ್ತು ಸಮಾಜ ಕಲ್ಯಾಣ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣ** :-

- **ನಾಗರೀಕ ಮಿತ್ರ ಯೋಜನೆ** :- ನಾಗರೀಕ ಮಿತ್ರ ಯೋಜನೆ ಅನುಷ್ಠಾನಕ್ಕಾಗಿ **ರೂ. 100** ಲಕ್ಷಗಳನ್ನು ಕಾಯ್ದಿರಿಸಲಾಗಿದೆ, ಸದರಿ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸ್ವಂತ ಉದ್ಯೋಗ ಕೈಗೊಂಡು ಸ್ವಾವಲಂಭಿಗಳಾಗಿ ಬದುಕುವ ಅವಕಾಶ ಕಲ್ಪಿಸಲಾಗುವುದು.
- **ಚರ್ಮ ಕುಟೀರ ನಿರ್ಮಾಣ** :- ಚರ್ಮಕುಟೀರ ಕಾರ್ಯಕ್ರಮಕ್ಕಾಗಿ **ರೂ. 20** ಲಕ್ಷಗಳನ್ನು ಕಾಯ್ದಿರಿಸಲಾಗಿದ್ದು, ಇತರ ಕಲ್ಯಾಣ ಕಾರ್ಯಕ್ರಮಗಳಿಗೆ **ರೂ. 538** ಲಕ್ಷಗಳನ್ನು ವಿನಿಯೋಗಿಸಲು ನಿರ್ಧರಿಸಲಾಗಿದೆ.

೩೬. **<u>ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ವೆಚ್ಚಗಳು</u>** :- ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳಿಗಾಗಿ **ರೂ. 210** ಲಕ್ಷಗಳನ್ನು 2013-14 ನೇ ಸಾಲಿನ ಆಯ-ವ್ಯಯದಲ್ಲಿ ಕಾಯ್ದಿರಿಸಲಾಗಿದೆ.

೩೭. **<u>"ವಿಕಲಚೇತನರಿಗೆ ನೆರವು" ಕಾರ್ಯಕ್ರಮ</u>** :- "ವಿಕಲಚೇತನರಿಗೆ ನೆರವು" ಕಾರ್ಯಕ್ರಮ ಅಡಿಯಲ್ಲಿ **ರೂ. ೮೬** ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

೩೮. **<u>"ನೆರವು ಯೋಜನೆ"</u>** **:-** ಅವಳಿ ನಗರ ವ್ಯಾಪ್ತಿಯ ಪ್ರದೇಶಗಳ ನಿರ್ಗತಿಕ/ವಸತಿ ರಹಿತರಿಗೆ ರಾತ್ರಿ ವಸತಿ ಕಲ್ಪಿಸುವ ಯೋಜನೆಯು ಇದಾಗಿರುತ್ತದೆ. ಭಾರತದ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ನಿರ್ಗತಿಕರಿಗೆ/ ವಸತಿ ರಹಿತರಿಗೆ ರಾತ್ರಿ ವಸತಿ ಕೇಂದ್ರಗಳನ್ನು ಸ್ಥಾಪಿಸಿ ಅಗತ್ಯ ತಂಗುವಿಕೆ ಸೌಲಭ್ಯಗಳನ್ನು ಅವಳಿ ನಗರದಲ್ಲಿ ಒದಗಿಸಬೇಕಾಗಿರುತ್ತದೆ. ಆದುದರಿಂದ 2013-14 ನೇ ಸಾಲಿನ ಆಯ-ವ್ಯಯದಲ್ಲಿ **ರೂ. 50** ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

೩೯. **<u>ಬೀದಿ ವ್ಯಾಪಾರ ವಲಯ ನಿರ್ಮಾಣ</u>** **:-** ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದಂತೆ ಈಗಾಗಲೇ ಹುಬ್ಬಳ್ಳಿಯಲ್ಲಿ 17, ಮತ್ತು ಧಾರವಾಡದಲ್ಲಿ 7 ಹೀಗೆ ಒಟ್ಟು 24 ಬೀದಿ ವ್ಯಾಪಾರ ವಲಯಗಳನ್ನು

ನಿರ್ಮಿಸಲಾಗಿದೆ. ಇದರಿಂದಾಗಿ ಬೀದಿ ವ್ಯಾಪಾರಸ್ಥರಿಗೆ ಮಾತ್ರವಲ್ಲದೇ ಸಾರ್ವಜನಿಕರಿಗೂ ಅನೂಕೂಲವಾಗುವಂತೆ ವ್ಯವಸ್ಥೆ ಕಲ್ಪಿಸಲಾಗುವುದು.

40. **<u>ನೂತನ ಸಭಾಭವನ</u> :-** ಪಾಲಿಕೆಯ ನೂತನ ಸಭಾಭವನವನ್ನು ನಿರ್ಮಿಸಲು **ರೂ. 1000** ಲಕ್ಷಗಳನ್ನು ಕೋರಿ ಪ್ರಸ್ತಾವನೆಯನ್ನು ಸರಕಾರಕ್ಕೆ ಸಲ್ಲಿಸಲಾಗಿದೆ. ಈ ಕಾಮಗಾರಿ ಅನುಷ್ಠಾನಗೊಂಡಲ್ಲಿ ಅತ್ಯಾಧುನಿಕ ಸಭಾಭವನ ಪಾಲಿಕೆಯ ಆವರಣದಲ್ಲಿ ನಿರ್ಮಾಣಗೊಳ್ಳಲಿದ್ದು ಪಾಲಿಕೆಯ ಸಭೆ ನಡೆಸಲು ಅನುಕೂಲವಾಗುವುದು. ಸರಕಾರದಿಂದ ಈಗಾಗಲೇ ಮಂಜೂರಾತಿ ಆಗಿದ್ದು ಆದೇಶದ ನಿರೀಕ್ಷೆಯಲ್ಲಿದ್ದೇವೆ.

41. **<u>ಟೌನ್ ಹಾಲ್ ನಿರ್ಮಾಣ</u> :-** ಹುಬ್ಬಳ್ಳಿಯ ಟೌನ್ ಹಾಲ್ ನಿರ್ಮಾಣದಿಂದ ಸಾರ್ವಜನಿಕರಿಗೆ ಸಭೆ ಸಮಾರಂಭ ನಡೆಸಲು ಅತೀ ಅವಶ್ಯವಾಗಿರುತ್ತದೆ. ಹುಬ್ಬಳ್ಳಿ ನಗರದಲ್ಲಿ ಸಾರ್ವಜನಿಕರಿಗೆ ಸಭೆ ಸಮಾರಂಭಗಳಿಗೆ ಅನುಕೂಲವಾಗುವಂತಹ ಕಟ್ಟಡ ಇಲ್ಲದೆ ಇರುವುದರಿಂದ ನಾಗರೀಕರ ಬೇಡಿಕೆಯಂತೆ ಕಟ್ಟಡ ನಿರ್ಮಾಣ ಮಾಡಲು **ರೂ. 950** ಲಕ್ಷಗಳ ಪ್ರಸ್ತಾವನೆಯನ್ನು ಈಗಾಗಲೇ ಸರಕಾರಕ್ಕೆ ಸಲ್ಲಿಸಲಾಗಿದ್ದು, ಅನುಮೋದನೆ ಆಗಿದ್ದು ಆದೇಶದ ನಿರೀಕ್ಷೆಯಲ್ಲಿದ್ದೇವೆ.

42. **<u>ಸಾರ್ವಜನಿಕ ಸ್ಪಂಧನಾ ಕೋಶ</u> :-** ಹುಬ್ಬಳ್ಳಿ  ಧಾರವಾಡ ಮಹಾನಗರ ಪಾಲಿಕೆಯು ಪಾರದರ್ಶಕ ಮತ್ತು ಸ್ಪರ್ಧಾತ್ಮಕ ಆಡಳಿತ ನೀಡಲು ಹಾಗೂ

ಸಾರ್ವಜನಿಕ ಕುಂದು ಕೊರತೆಗಳಿಗೆ ಸ್ಪಂಧಿಸಲು 24 ಘಂಟೆಗಳ (24X7) ಕಾರ್ಯನಿರತ ಸಹಾಯವಾಣಿಯನ್ನು ಚಾಲನೆಯಲ್ಲಿಡಲಾಗಿದೆ. ಸಾರ್ವಜನಿಕರು ಕುಂದು ಕೊರತೆಗಳನ್ನು ತಮ್ಮ ದೂರವಾಣಿ ಮತ್ತು ಎಸ್.ಎಮ್.ಎಸ್ ಮುಖಾಂತರ ನೀಡುವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

43. **ಆಯ-ವ್ಯಯ ನಿಯಂತ್ರಣ ವ್ಯವಸ್ಥೆ :-** ಆರ್ಥಿಕ ಶಾಖೆಯಲ್ಲಿ ಈಗಾಗಲೇ ಪಾಲಿಕೆಯ ಎಮ್.ಆಯ್.ಎಸ್ (M.I.S) ಸಮನ್ವಯದೊಂದಿಗೆ ಆಯ-ವ್ಯಯ ನಿಯಂತ್ರಣವನ್ನು ಅಭಿವೃದ್ಧಿಪಡಿಸಿದ ತಂತ್ರಾಂಶಗಳ ಸಹಾಯದಿಂದ ಪಾಲಿಸಲಾಗುತ್ತಿದೆ. ಆದುದರಿಂದ ಪಾಲಿಕೆಯಲ್ಲಿ ಗುತ್ತಿಗೆದಾರರ ಬಿಲ್ಲುಗಳು, ವೇತನ ಮುಂತಾದ ಪಾವತಿಗಳು ವ್ಯವಸ್ಥಿತವಾಗಿ ಆಗುತ್ತಿದೆ. ಗಣಿಕೀಕೃತ ನಿಧಿ ಆಧಾರಿತ ಲೆಕ್ಕ ಪತ್ರ ನಿರ್ವಹಣಾ ಪದ್ಧತಿಯು ಉತ್ತಮವಾಗಿ ಮುಂದುವರೆದಿದೆ. ನಮ್ಮ ರಾಜ್ಯದ ನಗರಾಡಳಿತದಲ್ಲಿಯೇ ಇದೊಂದು ಮಹತ್ತರ ಸಾಧನೆಯಾಗಿದೆ.

44. **ನಿವೃತ್ತಿ ದಿನದಂದು ನಿವೃತ್ತಿ ಸೌಲಭ್ಯಗಳ ಪ್ರಾಧೀಕರಣ :-** ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ ಹಲವು ವರ್ಷಗಳಿಂದ ಪಿಂಚಣಿ ಸೌಲಭ್ಯಗಳ ಪಾವತಿಗಳು ಕೆಲವು ತಾಂತ್ರೀಕ ಸಮಸ್ಯೆಗಳಿಂದ ವಿಳಂಬವಾಗುತ್ತಿದ್ದವು. ಮಹಾನಗರ ಪಾಲಿಕೆಯು ವಿಷಯವನ್ನು ಗಂಭೀರವಾಗಿ ಪರಿಗಣಿಸಿ ನಿವೃತ್ತ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಆಗುವ

ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸರಕಾದಿಂದ ಆದೇಶವನ್ನು ನಿರೀಕ್ಷಿಸಿ ಪಿಂಚಣಿ ಸೌಲಭ್ಯಗಳ ಪ್ರಾಧೀಕರಣ ಆದೇಶಗಳನ್ನು ನಿವೃತ್ತಿ ದಿನದಂದು ನೀಡುವ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿದ್ದು ಇದರಿಂದ ಪಾಲಿಕೆಯ ನಿವೃತ್ತ ನೌಕರರು ಹಾಗೂ ಅಧಿಕಾರಿಗಳಿಗೆ ಉಪಯೋಗವಾಗಿರುತ್ತದೆ. ಈ ಸಾಧನೆ ರಾಜ್ಯದ ನಗರಾಡಳತಲ್ಲಿಯೇ ಪ್ರಥಮ ಆಗಿದೆ.

45. **ಐ.ಎಸ್.ಓ. 9001–2008 ಮರು ದೃಢೀಕರಣ** :- ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯು ಐ.ಎಸ್.ಓ. 9001–2008 ಗುಣಮಟ್ಟದ ಪ್ರಮಾಣ ಪತ್ರ ಪಡೆದ ರಾಜ್ಯದ ಮೊದಲ ಮಹಾನಗರ ಪಾಲಿಕೆಯಾಗಿದೆ ಎಂಬುದು ನಮಗೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ. ಮಹಾನಗರ ಪಾಲಿಕೆ ಬೇರೆ ಬೇರೆ ಇಲಾಖೆಗಳ ಕಾರ್ಯನಿರ್ವಹಣಾ ವಿಧಾನಗಳನ್ನು ದಾಖಲಿಸಿ ಅದರಂತೆ ಅನುಷ್ಠಾನ-ಗೊಳಿಸಲಾಗುತ್ತಿರುವುದನ್ನು ಪರಿಶೀಲಿಸಲಾಗುತ್ತಿದೆ, ಮಾತ್ರವಲ್ಲದೆ ನಾಗರೀಕರಿಗೆ ಉತ್ತಮ ಗುಣಮಟ್ಟದ ಸೇವೆಯನ್ನು ನೀಡುವುದನ್ನು ಇರುವ ಇತಿಮಿತಿಯೊಳಗೆ ಖಚಿತಪಡಿಸಿಕೊಳ್ಳಲಾಗುತ್ತಿದೆ. ಪ್ರಮಾಣ ಪತ್ರ ನೀಡುವ ಸಂಸ್ಥೆಯು (TUV) ನವ್ಹೆಂಬರ್ 2012ರಲ್ಲಿ ಮರು ದೃಢೀಕರಣ

ಪರಿಶೋಧನೆ ನಡೆಸಿ ಪ್ರಶಂಸಾ ದೃಢೀಕರಣದೊಂದಿಗೆ ತಮ್ಮ ಕೇಂದ್ರ ಕಛೇರಿಗೆ ಮರು ದೃಢೀಕರಣಕ್ಕಾಗಿ ಶಿಫಾರಸ್ಸು ಮಾಡಿರುತ್ತದೆ.

46. **ಈದ್ಗಾ ಮೈದಾನ ಅಭಿವೃದ್ಧಿ** :- ನಗರ ಹೃದಯ ಭಾಗದಲ್ಲಿ ಇರುವ ಈದ್ಗಾ ಮೈದಾನವನ್ನು ಯಥಾವತ್ತಾಗಿ ಸುಂದರ ಪಡಿಸಲು ಪ್ರಸ್ತುತ ಆಯ-ವ್ಯಯದ ಅಭಿವೃದ್ಧಿ ಶೀರ್ಷಿಕೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

47. **ಪಾದಚಾರಿಗಳಿಗೆ ಅನುಕೂಲ** :- ಅವಳಿ ನಗರದ ಅನೇಕ ಸ್ಥಳಗಳಲ್ಲಿ ರಸ್ತೆಗಳನ್ನು ದಾಟುವ ಸಂದರ್ಭದಲ್ಲಿ ಅಂಡರ್ ಪಾಥ್ (ಸಬ್‌ವೇ) ಗಳ ಅವಶ್ಯಕತೆ ಇದ್ದು ಸುಮಾರು 10 ಸ್ಥಳಗಳಲ್ಲಿ ಅಂಡರ್ ಪಾಥ್‌ಗಳನ್ನು ನಿರ್ಮಿಸಲಾಗುವುದು.

48. **ಕರ್ನಾಟಕ ಸರಕಾರದ ಆಯ-ವ್ಯಯ ಕೊಡುಗೆ:** ಕರ್ನಾಟಕ ಸರಕಾರದ 13-14 ನೇ ಸಾಲಿನ ಆಯ-ವ್ಯಯದಲ್ಲಿ ಅವಳಿ ನಗರಕ್ಕೆ ಕೊಡಮಾಡಿದ ಮಾನ್ಯ ಮುಖ್ಯ ಮಂತ್ರಿಗಳ ಕೊಡುಗೆ ಈ ಕೆಳಗಿನಂತಿದೆ:

* ಘನ ತ್ಯಾಜ್ಯ ವಿಲೇವಾರಿಗೆ 100 ಕೋಟಿ
* ಸೌರ ನಗರಕ್ಕೆ 5 ಕೋಟಿ
* ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣ
* ಹೊರ ವರ್ತುಲ ರಸ್ತೆ

* ನಿರಂತರ ನೀರು ಯೋಜನೆ

* ಸವಾಯಿ ಗಂಧರ್ವ ಸಭಾಂಗಣ ಅಭಿವೃದ್ಧಿಗೆ ಮತ್ತು ಕಲಾಭವನ ಧಾರವಾಡಕ್ಕೆ 5 ಕೋಟಿ

* ಧಾರವಾಡದಲ್ಲಿ ಕ್ರೀಡಾ ಸಮುಚ್ಛಯ

* ಅವಳಿ ನಗರಗಳಲ್ಲಿ ಈಜುಕೊಳ ಅಭಿವೃದ್ಧಿ

* ಹುಬ್ಬಳ್ಳಿಯಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ 10 ಕೋಟಿ

* ನೀರಸಾಗರ ಪ್ರವಾಸೋಧ್ಯಮ ಕೇಂದ್ರ

* ಪರಿಸರ ಉದ್ಯಾನ ಸಂಶೋಧನಾ ಸಂಸ್ಥೆ ಸ್ಥಾಪನೆ

* ಸುರಕ್ಷಿತ ನಗರ ಭದ್ರತೆ : ಮೂಲಸೌಕರ್ಯ

* ಟ್ರಕ್ ಟರ್ಮಿನಲ್.

ಇಷ್ಟೊಂದು ದೊಡ್ಡ ಪ್ರಮಾಣದ ಅನುದಾನದ ಅವಳಿ ನಗರದ ಅಭಿವೃದ್ಧಿಗೆ ನೀಡಿದ ನಮ್ಮವರೇ ಆದ ನಮ್ಮ ನಾಡಿನ ಮುಖ್ಯ ಮಂತ್ರಿಗಳಾದ ಶ್ರೀ. ಜಗದೀಶ ಎಸ್. ಶೆಟ್ಟರ್ ರವರಿಗೆ ನಮ್ಮ ನಗರದ ಜನತೆಯ ಪರವಾಗಿ ಅಭಿನಂದನೆಗಳು.

49. **<u>ಪಾಲಿಕೆಯ ಆಡಳಿತಕ್ಕೆ ಸಲಹೆ ಮತ್ತು ಸೂಚನೆಗಳು</u>** :-

- ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯ ಪ್ರತಿ ಆಸ್ತಿಯು ತೆರಿಗೆ ಜಾಲಕ್ಕೆ ತರಬೇಕು. ತೆರಿಗೆ ವಸೂಲಾತಿಯಲ್ಲಿ ಇರುವ ತಾಂತ್ರಿಕ ತೊಂದರೆಗಳನ್ನು ಬಗೆಹರಿಸಿ ಪಾಲಿಕೆಗೆ ಬರಬೇಕಾದ ತೆರಿಗೆಗಳನ್ನು ವಸೂಲಿ ಮಾಡುವುದು ಪ್ರತಿಯೊಬ್ಬ ಅಧಿಕಾರಿಯ ಜವಾಬ್ದಾರಿಯಾಗಿರುತ್ತದೆ. ನಾಗರೀಕರ ಕುಂದು ಕೊರತೆಗಳನ್ನು ಆಲಿಸಿ ತಕರಾರುಗಳನ್ನು ತ್ವರಿತ ಗತಿಯಲ್ಲಿ ನಿವಾರಿಸುವ ಪದ್ಧತಿಯನ್ನು ಜಾರಿಗೆ ತರಬೇಕಾಗಿದೆ. ಯಾವುದೇ ಒಂದು ಆಸ್ತಿಯು ಪಾಲಿಕೆಯ ತೆರಿಗೆ ಜಾಲದಿಂದ ತಪ್ಪಿಹೋಗದಂತೆ ಕಾರ್ಯತತ್ಪರರಾಗಬೇಕು.

- ಕಟ್ಟಡ ಪರವಾನಿಗೆಗೆ ಸಂಬಂಧಿಸಿದ ಎಲ್ಲಾ ನಿಯಮಗಳನ್ನು ಪ್ರಥಮ ಹಂತದಲ್ಲಿಯೇ ಅನುಷ್ಠಾನಗೊಳಿಸುವಲ್ಲಿ ಪಾಲಿಕೆ ಕ್ರಮ ಜರುಗಿಸಬೇಕಾಗಿದೆ. ಅವಶ್ಯವಿದ್ದಲ್ಲಿ ಹಳೇಯದಾದ ಕಟ್ಟಡ ನಿರ್ಮಾಣ ಉಪ ವಿಧಿಗಳಿಗೆ ಸೂಕ್ತ ಮಾರ್ಪಾಡುಗಳನ್ನೂ ಮಾಡಿ ಸಾಮಾನ್ಯ ಸಭೆಯ ಮಂಜೂರಾತಿಯನ್ನು ಪಡೆದು ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಬೇಕು.

- ಮಾರುಕಟ್ಟೆ ಶುಲ್ಕ, ಜಾಹೀರಾತುಗಳ ಶುಲ್ಕ ಮುಂತಾದವುಗಳನ್ನು ಸರಿಯಾದ ಸಮಯಕ್ಕೆ ವಸೂಲಿಸಲು ಮತ್ತು ಸೋರುವಿಕೆಯನ್ನು

ತಡೆಗಟ್ಟಲು ಮನೆ ತೆರಿಗೆ ಬೇಡಿಕೆಯೊಂದಿಗೆ ತಂತ್ರಜ್ಞಾನವನ್ನು ಅಳವಡಿಸುವುದು ಮತ್ತು ನಿಯಮಾನುಸಾರ ನಮೂನೆಯಲ್ಲಿ ಡಿ.ಸಿ.ಬಿ.ಗಳನ್ನು ತಯಾರಿಸಿ ನಿರ್ವಹಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶವನ್ನು ಜಾರಿಗೊಳಿಸುವುದು ಅವಶ್ಯವಾಗಿದೆ.

- ನೀರು ಸರಬರಾಜು ಮಂಡಳಿಯ ನಿರ್ವಹಣಾ ವೆಚ್ಚಗಳಲ್ಲಿ ವಿದ್ಯುತ್ ಶುಲ್ಕ ವೇತನ ಇತ್ಯಾದಿಗಳನ್ನು ಪಾಲಿಕೆಯಿಂದ ಭರಿಸಲಾಗುತ್ತಿದ್ದು ಬಾಕಿ ಇರುವ ನೀರಿನ ಶುಲ್ಕವನ್ನು ವಸೂಲಿ ಮಾಡದೇ ಇರುವದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಮತ್ತು ವಸೂಲಿಸಿದ ಮೊಬಲಗನ್ನು ಪ್ರತ್ಯೇಕವಾದ ಖಾತೆಯಲ್ಲಿ ಇಡುವಂತೆ ಸೂಚಿಸಲಾಗಿದೆ.

- ಪಾಲಿಕೆಯ ಅಧಿಕಾರಿಗಳು ಇನ್ನೂ ಹೆಚ್ಚು ಕ್ರೀಯಾಶೀಲರಾಗಿ ದಕ್ಷತೆಯಿಂದ ವಸೂಲಾತಿ ಕ್ರಮಗಳನ್ನು ಕೈಗೊಳ್ಳುವುದರೊಂದಿಗೆ, ಮಹಾನಗರ ಪಾಲಿಕೆಯ ಖರ್ಚುಗಳಲ್ಲಿಯೂ ಸಹ ಸಾಧ್ಯವಿದ್ದಷ್ಟು ಮಿತವ್ಯಯ ಸಾಧಿಸಿ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಂಡು ಪೌರ ಸೌಲಭ್ಯಗಳನ್ನು ಸಮಸ್ತ ನಾಗರೀಕರಿಗೆ ಒದಗಿಸಲು ಸೂಚಿಸಿದೆ.

- ಸಂವಿಧಾನದ 74 ನೇ ತಿದ್ದುಪಡಿಯಲ್ಲಿ ಸೂಚಿಸಲಾದ ಅಂಶಗಳನ್ನು ಆಯ-ವ್ಯಯದಲ್ಲಿ ಅಳವಡಿಸಿಕೊಂಡಿದ್ದು, ಮಾನ್ಯ ಸದಸ್ಯರ ನಿರೀಕ್ಷೆಗೆ ಅನುಗುಣವಾಗಿರುತ್ತದೆ ಎಂದು ನಾನು ಭಾವಿಸುತ್ತೇನೆ.

**<u>ಪೂಜ್ಯ ಮಹಾಪೌರರೇ, ಗೌರವಾನ್ವಿತ ಸದಸ್ಯರೇ, ಜನಸೇವೆಯೇ ಜನಾರ್ಧನನ ಸೇವೆ ಮತ್ತು ಕಾಯಕವೇ ಕೈಲಾಸ</u>** ಎಂಬಂತೆ ಅವಳಿ ನಗರದ ನಾಗರೀಕರಿಗಾಗಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಸಾಮಾಜಿಕ ನ್ಯಾಯ ಮತ್ತು ಸಮಾನತೆ ಸಂಪನ್ಮೂಲಗಳ ಅಭಿವೃದ್ಧಿ ಅವುಗಳ ಸಮರ್ಪಕ ಬಳಕೆ ಮುಂತಾದ ಜನಪರ ಕಾರ್ಯಕ್ರಮಗಳನ್ನು ನನ್ನ ಭಾಷಣದಲ್ಲಿ ಸಂಕ್ಷಿಪ್ತವಾಗಿ ತಮ್ಮೆಲ್ಲರ ಮುಂದೆ ಮಂಡಿಸಿರುತ್ತೇನೆ.

ಸನ್ 2013-14 ನೇ ಸಾಲಿನ ಆಯ-ವ್ಯಯ ತಯಾರಿಕೆಗೆ ಸಂಪೂರ್ಣವಾದ ಸಹಕಾರ ನೀಡಿದ ಪೂಜ್ಯ ಮಹಾಪೌರರಿಗೂ, ಮಾನ್ಯ ಉಪ ಮಹಾಪೌರರಿಗೂ, ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರಿಗೂ, ಸಭಾ ನಾಯಕರಿಗೂ, ಎಲ್ಲಾ ಪ್ರತಿಪಕ್ಷದ ನಾಯಕರಿಗೂ, ಗೌರವಾನ್ವಿತ ಸದಸ್ಯರಿಗೂ ಪೂರ್ಣ ಸಹಕಾರ ಹಾಗೂ ಸಲಹೆ ನೀಡಿದ ಎಲ್ಲ ಸದಸ್ಯರಿಗೂ ಹಾಗೂ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ಹೃದಯಪೂರ್ವಕ ಅಭಿನಂದನೆಗಳು.

ಈ ಆಯ-ವ್ಯಯವನ್ನು ಸಿದ್ದಪಡಿಸುವಲ್ಲಿ ಮಾರ್ಗದರ್ಶನ ನೀಡಿದ ಆಯುಕ್ತರಾದ ಮಾನ್ಯ ಶ್ರೀ ವಾಯ್.ಎಸ್.ಪಾಟೀಲ್, ಕ.ಆ.ಸೇ, ಹಾಗೂ ಅವರ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ಧನ್ಯವಾದಗಳು.

ಸನ್ 2012-13ರ ಪರಿಷ್ಕೃತ ಆಯ-ವ್ಯಯ ಅಂದಾಜುಗಳು ಮತ್ತು 2013-14 ಆಯ-ವ್ಯಯ ಈ ಅಂದಾಜುಗಳನ್ನು ಈ ಘನ ಸಭೆಯ ಮುಂದೆ ಮಂಡಿಸಿದ್ದೇನೆ. ಇದಕ್ಕೆ ಈ ಘನ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಬೇಕೆಂದು ವಿನಂತಿಸುಕೋಳ್ಳುತ್ತೇನೆ.

**ಜೈಹಿಂದ್**

**ಜೈ- ಕರ್ನಾಟಕ**

**ಜೈ-ಹುಬ್ಬಳ್ಳಿ-ಧಾರವಾಡ**

# ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

# ಸನ್ 2013-14 ನೇ ಸಾಲಿನ ಆಯ-ವ್ಯಯ ಅಂದಾಜು ಪತ್ರಿಕೆಯ

# ಸಾರಾಂಶ

- ಯಾವುದೇ ಹೆಚ್ಚುವರಿ ತೆರಿಗೆ ಇರುವುದಿಲ್ಲ.
- ಪಾಲಿಕೆಯ ವ್ಯಾಪ್ತಿಯಲ್ಲಿನ ಎಲ್ಲಾ ಆಸ್ತಿಗಳು ತೆರಿಗೆ ಜಾಲದ ವ್ಯಾಪ್ತಿಗೆ.
- ನಗರ ಯೋಜನೆ ನಿಯಮಗಳ ಕಟ್ಟು ನಿಟ್ಟಿನ ಅನುಷ್ಠಾನ, ಅವಶ್ಯವಿದ್ದಲ್ಲಿ ಹಳೆಯದಾದ ಉಪವಿಧಿಗಳಿಗೆ ಸೂಕ್ತ ಮಾರ್ಪಾಡು.
- ಮಾರುಕಟ್ಟೆ ಶುಲ್ಕ, ಜಾಹೀರಾತು ಶುಲ್ಕ ಮುಂತಾದವುಗಳನ್ನು ಸರಿಯಾದ ಸಮಯದಲ್ಲಿ ವಸೂಲಿಸಲು ಮತ್ತು ಸೋರುವಿಕೆಯನ್ನು ತಡೆಗಟ್ಟಲು ಮಾಹಿತಿ ತಂತ್ರಜ್ಞಾನದ ಅಳವಡಿಕೆ.
- ನೀರು ಸರಬರಾಜು ಮಂಡಳಿಯಿಂದ ಬಾಕಿ ಇರುವ ನೀರು ಶುಲ್ಕದ ವಸೂಲಾತಿಗಾಗಿ ಗಂಭೀರ ಚಿಂತನೆ.

1. 2013-14 ನೇ ಸಾಲಿನ ನಿರೀಕ್ಷಿತ ರಾಜಸ್ವ ಆದಾಯ ರೂ 24510.46 ಲಕ್ಷಗಳು
2. ಬಂಡವಾಳ ಸ್ವೀಕೃತಿ ರೂ 250.00 ಲಕ್ಷಗಳು

------------------------

ಒಟ್ಟು ರೂ 24710.46 ಲಕ್ಷಗಳು

3. ರಾಜಸ್ವ ವೆಚ್ಚ ರೂ 17445.35 ಲಕ್ಷಗಳು
4. ಬಂಡವಾಳ ವೆಚ್ಚ ರೂ 9116.92 ಲಕ್ಷಗಳು

------------------------

ಒಟ್ಟು ರೂ 26562.27 ಲಕ್ಷಗಳು

ಬಂಡವಾಳ ಖಾತೆಯಲ್ಲಿ ಕೊರತೆಯಾಗುವ ರೂ. 8866.92 ಲಕ್ಷಗಳನ್ನು ಆರಂಭ ಶಿಲ್ಕು ರೂ. 1802.52 ಲಕ್ಷಗಳು ಮತ್ತು ರಾಜಸ್ವ ಖಾತೆಯಲ್ಲಿನ ಮಿಗತೆ ರೂ. 7065.11 ಲಕ್ಷಗಳೊಂದಿಗೆ ಹೊಂದಾಣಿಕೆ ಮಾಡಿ ವೆಚ್ಚಗಳನ್ನು ಭರಿಸಲಾಗುವುದು. ಆದುದರಿಂದ ಯಾವುದೇ ಬಾಹ್ಯ ಮೂಲದಿಂದ ಬಾಹ್ಯ ಸಾಲವನ್ನು ಪಡೆಯದೇ ಮತ್ತು ಯಾವುದೇ ಹೊಸ ತೆರಿಗೆಯನ್ನು ವಿಧಿಸಿದೆ ರಾಜಸ್ವ ಖಾತೆಯ ಮಿಗತೆ ಹಾಗೂ ಆರಂಭಿಕ ಶಿಲ್ಕುಗಳಿಂದ ಸರಿದೂಗಿಸಲಾಗಿದೆ.

ಅಸಮಾನ್ಯ ಖಾತೆಯಲ್ಲಿ ರೂ. 4440.63 ಲಕ್ಷಗಳು ಸ್ವೀಕೃತಿಯನ್ನು ನಿರೀಕ್ಷಿಸಿದ್ದು, ಅಸಾಮಾನ್ಯ ಖಾತೆಯ ಪಾವತಿಗಳು ರೂ. 4196.68 ಲಕ್ಷಗಳು ಆಗಿರುತ್ತದೆ.

ಒಟ್ಟಾರೆ 2013-14 ನೇ ಸಾಲಿನಲ್ಲಿ ರೂ. 244.66 ಲಕ್ಷಗಳ ಮಿಗತೆಯ ಆಯ-ವ್ಯಯವನ್ನು ಮಂಡಿಸಲಾಗಿದೆ.

**ಆದಾಯ ಸ್ವೀಕೃತಿಗಳು**

| | | | | |
|---|---|---|---|---|
| 1 | ಆಸ್ತಿ ತೆರಿಗೆಯಿಂದ | ರೂ. | 3975.86 | ಲಕ್ಷಗಳು |
| 2 | ಘನ ತ್ಯಾಜ್ಯ ವಸ್ತು ನಿರ್ವಹಣೆ ಮತ್ತು ನೈರ್ಮಲ್ಯ | ರೂ. | 653.00 | ಲಕ್ಷಗಳು |
| 3 | ಜಾಹೀರಾತು ತೆರಿಗೆಯಿಂದ | ರೂ. | 138.30 | ಲಕ್ಷಗಳು |
| 4 | ಮೂಲಭೂತ ಸೌಕರ್ಯಗಳ ಉಪಕರ | ರೂ. | 50.00 | ಲಕ್ಷಗಳು |
| 5 | ನಗರ ಯೋಜನೆ | ರೂ. | 1954.10 | ಲಕ್ಷಗಳು |
| 6 | ಕೈಗಾರಿಕೆ ಉದ್ದಿಮೆ ಪರವಾನಿಗೆ | ರೂ. | 197.15 | ಲಕ್ಷಗಳು |
| 7 | ವ್ಯಾಪಾರ ಮಳಿಗೆ ಸ್ಥಿರಾಸ್ಥಿ | ರೂ. | 62.05 | ಲಕ್ಷಗಳು |
| 8 | ವಾಣಿಜ್ಯ ಸಂಕೀರ್ಣ ಬಾಡಿಗೆ | ರೂ. | 418.12 | ಲಕ್ಷಗಳು |
| 9 | ನೆಲಗುತ್ತಿಗೆ ವಸತಿ ಭೂ ಬಾಡಿಗೆ | ರೂ. | 70.00 | ಲಕ್ಷಗಳು |
| 10 | ರಸ್ತೆ ಕಡಿತದ ಶುಲ್ಕ | ರೂ. | 115.00 | ಲಕ್ಷಗಳು |

| | | | | |
|---|---|---|---|---|
| 11 | ಜನನ ಮರಣ ಪ್ರಮಾಣ ಪತ್ರ | ರೂ. | 77.00 | ಲಕ್ಷಗಳು |
| 12 | ಪಾಲಿಕೆಯ ಆಸ್ಪತ್ರೆಗಳಿಂದ | ರೂ. | 40.00 | ಲಕ್ಷಗಳು |
| 13 | ಸ್ಥಿರಾಸ್ಥಿ ವರ್ಗಾವಣೆ (ಜಿಲ್ಲಾ ನೊಂದಣಿ) | ರೂ. | 83.00 | ಲಕ್ಷಗಳು |
| 14 | ದಂಡಗಳು | ರೂ. | 160.00 | ಲಕ್ಷಗಳು |
| 15 | ಇತರೆ ಸ್ವೀಕೃತಿಗಳು | ರೂ. | 243.61 | ಲಕ್ಷಗಳು |
| 16 | ವಿದ್ಯುತ್ ಅನುದಾನ (ಸರಕಾರದಿಂದ) | ರೂ. | 2856.57 | ಲಕ್ಷಗಳು |
| 17 | ವೇತನ ಅನುದಾನ (ಸರಕಾರದಿಂದ) | ರೂ. | 7815.93 | ಲಕ್ಷಗಳು |
| 18 | ಎಸ್.ಎಫ್.ಸಿ ಮುಕ್ತ ನಿಧಿ | ರೂ. | 2479.56 | ಲಕ್ಷಗಳು |
| 19 | ಮಾನ್ಯ ಮುಖ್ಯ ಮಂತ್ರಿಯವರ ವಿಶೇಷ ಎಸ್.ಎಫ್.ಸಿ ಅನುದಾನ | ರೂ. | 1645.00 | ಲಕ್ಷಗಳು |
| 20 | 13 ನೇ ಹಣಕಾಸು ಅನುದಾನ | ರೂ. | 1375.61 | ಲಕ್ಷಗಳು |
| 21 | ಸ್ಥಳೀಯ ಶಾಸಕರ ಹಾಗೂ ಸಂಸದರ ಅನುದಾನ | ರೂ. | 100.00 | ಲಕ್ಷಗಳು |
| 22 | ಬಂಡವಾಳ ಸ್ವೀಕೃತಿ | ರೂ. | 250.00 | ಲಕ್ಷಗಳು |

2013–14 ನೇ ಸಾಲಿನ ಆಯ–ವ್ಯಯ ಪತ್ರಿಕೆಯಲ್ಲಿ ರಾಜಸ್ವ ಮತ್ತು ಬಂಡವಾಳ ಸ್ವೀಕೃತಿ ಒಟ್ಟು ಸೇರಿ **ರೂ. 24760.46** ಲಕ್ಷಗಳನ್ನು ನಿರೀಕ್ಷಿಸಲಾಗಿದೆ.

ಪಾಲಿಕೆಯ ಸ್ವಂತ ಆದಾಯ **ರೂ. 8237. 79** ಲಕ್ಷಗಳನ್ನು 13–14 ನೇ ಸಾಲಿಗೆ ನಿರೀಕ್ಷಿಸಲಾಗಿದೆ.

## ವೆಚ್ಚಗಳು

| | | | | |
|---|---|---|---|---|
| 1 | ಆಡಳಿತ ನಿರ್ವಹಣೆ ಮತ್ತು ಮಾನವ ಸಂಪನ್ಮೂಲಗಳು | ರೂ. | 7815.93 | ಲಕ್ಷಗಳು |
| 2 | ಹೊರಗುತ್ತಿಗೆ ಮಾನವ ಸಂಪನ್ಮೂಲಗಳು | ರೂ. | 331.69 | ಲಕ್ಷಗಳು |
| 3 | ಸಾಲ ಮರುಪಾವತಿ | ರೂ. | 13.00 | ಲಕ್ಷಗಳು |
| 4 | ವಂತಿಕೆಗಳು (KUWSIP) | ರೂ. | 500.00 | ಲಕ್ಷಗಳು |
| 5 | ಪಾಲಿಕೆಯ ಕಟ್ಟಡಗಳ ನಿರ್ವಹಣೆ | ರೂ. | 65.00 | ಲಕ್ಷಗಳು |
| 6 | ನಗರದ ಪ್ರಮುಖ ರಸ್ತೆಗಳ ದುರಸ್ಥಿಗಾಗಿ | ರೂ. | 170.00 | ಲಕ್ಷಗಳು |
| 7 | ಒಳಚರಂಡಿ ವ್ಯವಸ್ಥೆ ಮತ್ತು ದುರಸ್ಥಿಗಾಗಿ | ರೂ. | 150.00 | ಲಕ್ಷಗಳು |
| 8 | ರಸ್ತೆಗಳ ಅಭಿವೃದ್ಧಿ ಮತ್ತು ನಿರ್ಮಾಣ | ರೂ. | 2262.00 | ಲಕ್ಷಗಳು |
| 9 | ಕಟ್ಟಡಗಳ ನಿರ್ಮಾಣ | ರೂ. | 468.18 | ಲಕ್ಷಗಳು |
| 10 | ಪಾದಚಾರಿ ರಸ್ತೆ ನಿರ್ಮಾಣ | ರೂ. | 95.00 | ಲಕ್ಷಗಳು |
| 11 | ಹೊಸ ಆಸ್ತಿಗಳ ನಿರ್ಮಾಣ ಮತ್ತು ಕಾಮಗಾರಿಗಳು | ರೂ. | 584.00 | ಲಕ್ಷಗಳು |
| 12 | ಪೌರ ಸೌಕರ್ಯಗಳ ಒಳಚರಂಡಿ ಯೋಜನೆ | ರೂ. | 560.72 | ಲಕ್ಷಗಳು |

| | | | | |
|---|---|---|---|---|
| 13 | ತೆರೆದ ಚರಂಡಿ | ರೂ. | 777.72 | ಲಕ್ಷಗಳು |
| 14 | ಸಾರ್ವಜನಿಕ ಶೌಚಾಲಯ | ರೂ. | 100.00 | ಲಕ್ಷಗಳು |
| 15 | ಬೀದಿ ದೀಪ ನಿರ್ವಹಣೆ | ರೂ. | 370.00 | ಲಕ್ಷಗಳು |
| 16 | ಹೊಸ ಬೀದಿ ದೀಪಗಳ ಸ್ಥಾವರಗಳು | ರೂ. | 346.36 | ಲಕ್ಷಗಳು |
| 17 | ಧಾರವಾಡ ಉತ್ಸವ | ರೂ. | 25.00 | ಲಕ್ಷಗಳು |
| 18 | ಸಭೆ ಸಮಾರಂಭಗಳು | ರೂ. | 55.00 | ಲಕ್ಷಗಳು |
| 19 | ಸುವರ್ಣ ಮಹೋತ್ಸವ | ರೂ. | 25.00 | ಲಕ್ಷಗಳು |
| 20 | "ವಿದ್ಯಾಶ್ರೀ" ಪುರಸ್ಕಾರ | ರೂ. | 5.00 | ಲಕ್ಷಗಳು |
| 21. | "ಸುವರ್ಣ ಬಸ್ ನಿಲ್ದಾಣ (100)" | ರೂ. | 200.00 | ಲಕ್ಷಗಳು |
| 22. | ಹಸಿರು–ಉಸಿರು ಯೋಜನೆ | ರೂ. | 343.18 | ಲಕ್ಷಗಳು |
| 23. | ಆರೋಗ್ಯ ರಕ್ಷೆ ಯೋಜನೆ | ರೂ. | 200.00 | ಲಕ್ಷಗಳು |
| 24. | ಪೌರಕಾರ್ಮಿಕರ ಮಕ್ಕಳಿಗೆ ಲ್ಯಾಪ್‌ಟಾಪ್ | ರೂ. | 10.00 | ಲಕ್ಷಗಳು |
| 25. | ಪಾಲಿಕೆಯ ನೌಕರರಿಗೆ ಮನೆ ಕಟ್ಟಲು ಸಾಲ | ರೂ. | 120.00 | ಲಕ್ಷಗಳು |
| 26. | ಮಹಿಳಾ ಸುರಕ್ಷತೆ | ರೂ. | 25.00 | ಲಕ್ಷಗಳು |
| 27. | ಆರೋಗ್ಯ ಮತ್ತು ವೈದ್ಯಕೀಯ ಸೇವೆ | ರೂ. | 725.95 | ಲಕ್ಷಗಳು |
| 28. | ಕ್ರೀಡಾ ಚಟುವಟಿಕೆ | ರೂ. | 46.00 | ಲಕ್ಷಗಳು |
| 29. | ಸುವರ್ಣಶ್ರೀ ವಿಮಾ ಯೋಜನೆ | ರೂ. | 200.00 | ಲಕ್ಷಗಳು |
| 30 | ಕೊಳಚೆ ಪ್ರದೇಶದಲ್ಲಿ ತುರ್ತು ನಾಲಾ ನಿರ್ಮಾಣ ಮತ್ತು ಕೆರೆಗಳ ಅಭಿವೃದ್ಧಿ | ರೂ. | 100.00 | ಲಕ್ಷಗಳು |
| 30 | ಪಾಲಿಕೆಯಲ್ಲಿ ವಿಲೀನಗೊಂಡ ಹಳ್ಳಿಗಳ ನಿರ್ಮಾಣ | ರೂ. | 100.00 | ಲಕ್ಷಗಳು |
| 31. | ಮಾರುಕಟ್ಟೆಗಳಲ್ಲಿ ಮೂಲಭೂತ ಸೌಕರ್ಯ | ರೂ. | 150.00 | ಲಕ್ಷಗಳು |
| 32. | ಆಸ್ಪತ್ರೆಗಳ ನವೀಕರಣ | ರೂ. | 108.00 | ಲಕ್ಷಗಳು |
| 33. | ಸಹಭಾಗಿತ್ವ ಯೋಜನೆ | ರೂ. | 25.00 | ಲಕ್ಷಗಳು |
| 34. | ನಾಗರೀಕ ಸುರಕ್ಷತೆಗೆ ಸಿಗ್ನಲ್‌ಗಳಲ್ಲಿ ಸಿಸಿ ಕ್ಯಾಮರಾ | ರೂ. | 16.00 | ಲಕ್ಷಗಳು |
| 35. | ನೈರ್ಮಲ್ಯ ಮತ್ತು ಘನ ತ್ಯಾಜ್ಯ ನಿರ್ವಹಣೆ | ರೂ. | 2580.90 | ಲಕ್ಷಗಳು |
| 36. | ಆಧುನಿಕ ಬಸ್ ನಿಲ್ದಾಣ | ರೂ. | 50.00 | ಲಕ್ಷಗಳು |
| 37. | ನಾಗರೀಕ ಮಿತ್ರ ಯೋಜನೆ | ರೂ. | 100.00 | ಲಕ್ಷಗಳು |
| 38. | ಚರ್ಮ ಕುಟೀರ ನಿರ್ಮಾಣ | ರೂ. | 20.00 | ಲಕ್ಷಗಳು |
| 39. | ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮ | ರೂ. | 210.00 | ಲಕ್ಷಗಳು |
| 40. | ವಿಕಲ ಚೇತನರಿಗೆ ನೆರವು ಕಾರ್ಯಕ್ರಮ | ರೂ. | 86.00 | ಲಕ್ಷಗಳು |
| 41. | ನೆರವು ಯೋಜನೆ | ರೂ. | 50.00 | ಲಕ್ಷಗಳು |